ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

# ತಪೋವಾಣಿ

ಸಂ. 6 ಸಂ. 2 ಫೆಬ್ರವರಿ 2009 ರೂ.15

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**

ಬೆಳಕನ್ನು ಚಾನೆಲ್ ಮಾಡಲು 26–02–2009 ಗುರುವಾರ, ನಾವು ಒಂದು ದೊಡ್ಡ ಸಮಾರಂಭವನ್ನು ಏರ್ಪಡಿಸಿದ್ದೇವೆ. ಆ ದಿನ ಸೇರುವ ಜನರಷ್ಟೇ ಅಲ್ಲ, ಇಡೀ ಪ್ರಪಂಚದ ಜನರಲ್ಲಿ ನಾವು ಕೇಳಿಕೊಳ್ಳುವುದೇನೆಂದರೆ, ಎಲ್ಲರೂ ಒಟ್ಟಿಗೆ ಬೆಳಕನ್ನು ಚಾನೆಲ್ ಮಾಡೋಣ. ನಮ್ಮ ಉದ್ದೇಶ ದೊಡ್ಡದು, ಹಣ ಕಡಿಮೆ. ಇರುವ ಹಣದಿಂದ ಸಾಧ್ಯವಾದಷ್ಟೂ, ಪೇಪರುಗಳಲ್ಲಿ, ಟಿವಿ ಚಾನೆಲ್‌ಗಳ ಮೂಲಕ, SMS, ಇ–ಮೇಲ್‌ಗಳ ಮೂಲಕ ಸಮಾರಂಭದ ಬಗ್ಗೆ ಪ್ರಚಾರಮಾಡುತ್ತೇವೆ. ಆ ದಿನ ಸಂಜೆ 7–30 ರಿಂದ ಏಳು ನಿಮಿಷಗಳ ಕಾಲ ಬೆಳಕನ್ನು ತಮ್ಮತಮ್ಮ ಜಾಗದಿಂದಲೇ ಚಾನೆಲ್‌ಮಾಡಲು ಸಂದೇಶವನ್ನು ಸುತ್ತಲೂ ಎಲ್ಲರಿಗೆ ಹರಡೋಣ. ಲಕ್ಷಾಂತರ ಜನ ಚಾನೆಲ್‌ಮಾಡಲಿ.

ಬೆಳಕು ಅಂದರೆ ಏನು? ಬೆಳಕು ಅಂದರೆ ಚೇತನ. ಕ್ರಿಯಾತ್ಮಕ ಬುದ್ಧಿಶಕ್ತಿ.

ಎಲ್ಲ ಸೃಷ್ಟಿಯ ಮೂಲ.

ಬೆಳಕನ್ನು ಚಾನೆಲ್‌ಮಾಡುವ ಉದ್ದೇಶ ಏನು? ಹೀಲ್‌ಮಾಡುವುದು. ಮುಂಬೈನ ಗಾಯಗಳನ್ನು ಹೀಲ್‌ಮಾಡುವುದು. ಗಾಜಾದ ಮತ್ತು ಪ್ರಪಂಚದ ಎಲ್ಲ ಗಾಯಗಳನ್ನು ಹೀಲ್‌ಮಾಡುವುದು. ವ್ಯಕ್ತಿಗಳ, ದೇಶಗಳ ಮತ್ತು ಈ ಭೂಮಿಯ ಗಾಯಗಳನ್ನು ಹೀಲ್‌ಮಾಡುವುದು. ನಾವು ಬೆಳಕನ್ನು ಚಾನೆಲ್‌ಮಾಡುವುದು ಶಾಂತಿಗಾಗಿ, ಹೊಸ ಯುಗದ ಹೊಸ ಎನರ್ಜಿಗಳನ್ನು ತರುವುದಕ್ಕಾಗಿ, ಪುನರುತ್ಥಾನಕ್ಕಾಗಿ, ಪರಿವರ್ತನೆಗಾಗಿ ಮತ್ತು ಮಾನವ–ಮೂಲ ಪೀಡೆಗಳಿಂದ ಪರಿಹಾರಕ್ಕಾಗಿ.

ಬೆಳಕು ಹೇಗೆ ಕೆಲಸಮಾಡುತ್ತದೆ? ಬೆಳಕು ನೇರವಾಗಿ ಏನೂ ಮಾಡುವುದಿಲ್ಲ. ಬೆಳಕನ್ನು ಚಾನೆಲ್‌ಮಾಡಿದ ಕೂಡಲೆ ಯುದ್ಧಗಳು ನಿಲ್ಲುವುದಿಲ್ಲ. ಪವಾಡಗಳು ನಡೆಯುವುದಿಲ್ಲ. ಬೆಳಕು ತನ್ನದೇ ರೀತಿಯಲ್ಲಿ ಕೆಲಸಮಾಡುತ್ತದೆ. ಬದಲಾವಣೆಗಳು ಖಂಡಿತ. ಉಪಯೋಗಗಳು ಖಂಡಿತ.

ಬೆಳಕು ಮೇಲೆ ಇದೆ ಮತ್ತು ಅದಕ್ಕೆ ಬುದ್ಧಿಶಕ್ತಿ ಇದೆ. ಅಂದರೆ ಚಾನಲ್ ಮಾಡದೆ ಅದು ಏಕೆ ನೇರವಾಗಿ ಕೆಲಸ ಮಾಡುವುದಿಲ್ಲ? ಅದಕ್ಕೆ ಕೆಲವು ಆಧ್ಯಾತ್ಮಿಕ ಕಾಯಿದೆಗಳು ಕಾರಣ. ನಾವು ಬೆಳಕನ್ನು ಕೆಳಗೆ ಇಳಿಯಲು ಕೇಳಬೇಕು. ನಾವು ಚಾನೆಲ್‌ಗಳಾಗಲು ಸಿದ್ಧರಾಗಬೇಕು. ನಾವು ಹೆಚ್ಚಿನ ಜನ ಚಾನೆಲ್ ಮಾಡಿದರೆ, ಹೆಚ್ಚಿನ ಪ್ರಭಾವ ಉಂಟಾಗುತ್ತದೆ. ಹೆಚ್ಚಿನ ಜನ ಏಕಕಾಲದಲ್ಲಿ ಚಾನೆಲ್‌ಮಾಡಿದರೆ ಪ್ರಭಾವ ಬೇಗನೆ ಉಂಟಾಗುತ್ತದೆ.

ಈ ಸಮಾರಂಭ ಏಕೈಕ. ಇಲ್ಲಿ ಪ್ರವಚನಗಳಿರುವುದಿಲ್ಲ. ಉಪದೇಶಗಳಿರುವುದಿಲ್ಲ. ಸದಸ್ಯರನ್ನಾಗಿಸಿಕೊಳ್ಳುವ ಸಂಭ್ರಮವಿರುವುದಿಲ್ಲ. ಇದು ಹೊಸ ಜೀವನ ಮತ್ತು ಹೊಸ ಭವಿಷ್ಯಗಳನ್ನು ಬೆಳಕಿನ ಮೂಲಕ ಬೆಳಗಿಸಿಕೊಳ್ಳಲು ಒಂದು ಹಿರಿಯ ಅವಕಾಶ. ಈ ಮೂರು ದಶಕಗಳಲ್ಲಿ ನಡೆಯುವ ಒಂದು ಅತಿ ಮುಖ್ಯವಾದ ಆಧ್ಯಾತ್ಮಿಕ ಘಟನೆ.

ಈ ಘಟನೆ ವಿಶ್ವ ಸಂಚಲನದ ಒಂದು ಭಾಗ.

18–05–1981ರಂದು, ಅಮರರವರು ಮನೋವತಿಯಲ್ಲಿದ್ದ ಅವರ ಒಂದು ಪುಟ್ಟ ಮನೆಯ ಬೀಗದ ಕೈಯನ್ನು ನನ್ನ ಕೈಯಲ್ಲಿ ಇಡುತ್ತ ನನ್ನನ್ನು ಕೇಳಿದರು–"ಇದು ಏನು ಗೊತ್ತಾ?". ನಾನು, ಗೊತ್ತು ಎಂದೆ.

ಅದು ಬರಿ ಒಂದು ಬೀಗದ ಕೈ ಆಗಿರಲಿಲ್ಲ. ಅದು ಒಂದು ಜವಾಬ್ದಾರಿ ಆಗಿತ್ತು. ಅದೊಂದು ಅವಕಾಶ, ಒಂದು ಸಿರಿ. ಅಮರರವರು ಬಹಳ ಅಮೂಲ್ಯ ವಸ್ತುಗಳನ್ನು ನನಗೆ ಕೊಟ್ಟಿದ್ದರು. ಆಗ ನನಗೆ ಅವು ಅಷ್ಟು ಸ್ಪಷ್ಟವಾಗಿ ತಿಳಿದಿರಲಿಲ್ಲ. ಅಮರರವರು ನನಗೆ ಬೆಳಕು ಮತ್ತು ಪ್ರೀತಿಗಳನ್ನು ಜೊತೆಯಲ್ಲಿ ಕೊಟ್ಟಿದ್ದರು.

ನಾವು ನಮ್ಮ ಗುರುವಿನೊಂದಿಗೆ ಸಂಪರ್ಕದಲ್ಲಿರುವಾಗ ಸಮಯ–ದೂರಗಳು ಮಾಯವಾಗುತ್ತವೆ. ಆದ್ದರಿಂದ, ನಾನು ಅಮರರವರನ್ನು ಮಿಸ್‌ಮಾಡುವುದಿಲ್ಲ. ಅವರು ಯಾವಾಗಲೂ ಇಲ್ಲಿಯೇ, ಹತ್ತಿರದಲ್ಲಿಯೇ, ಇರುತ್ತಾರೆ. ನಿಜವಾದ ಸಂಬಂಧಗಳು ಸದಾಕಾಲ ಉಳಿಯುತ್ತವೆ. ನಕಲಿ ಸಂಬಂಧಗಳು ಮರೆಯಾಗುತ್ತವೆ.

---

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದ್ದಾರೆ.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ–ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.
- ★ ದೇವರು ನಮ್ಮ ಗುರು. ಋಷಿಗಳು ನಮ್ಮ ಮಾರ್ಗದರ್ಶಕರು.

ಮಾನಸ ಫೌಂಡೇಷನ್ (ರಿ)
ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ 562 149. ಭಾರತ.
✆ (080) 2846 5280, 2271 5501, 93420 30250 (ಬೆಳಗ್ಗೆ 10ರಿಂದ ಮಧ್ಯಾಹ್ನ 1)
ಇ–ಮೇಲ್: info@saptarishis.com ವೆಬ್–ಸೈಟ್: www.saptarishis.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಸಾಯಿ ಮಂಡಳಿ, ಸಂಪಿಗೆ ರೋಡ್,
ಮಲ್ಲೇಶ್ವರಂ

### ಆನೇಕಲ್ಲಿನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ)**
**ಪ್ರಕಾಶ್‌ಮಾರ್ಗ (ಮರಾಠಿ)**
**ವಾರ್ತಾಪತ್ರದ ವಾರ್ಷಿಕ ಚಂದಾ ರೂ.200/-**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



ಜಪಾನಿನ, ನಮ್ಮ ದೂರಕಲಿಕೆ ಸಾಧಕರು ಡಿಸೆಂಬರ್ ತಿಂಗಳ "iGuruji" ಚರ್ಚೆಯಲ್ಲಿ ಭಾಗವಹಿಸಿದರು.

### ಅಮರ ಜಯಂತಿ

1–2–2009 ರಂದು, ಭಾನುವಾರ 6 ಘಂಟೆಗೆ ಆನೇಕಲ್ಲಿನಲ್ಲಿ ಆಚರಿಸಲಾಗುವುದು ಮತ್ತು ಹೊಸ ಗ್ರಂಥಾಲಯವನ್ನು ಉದ್ಘಾಟಿಸಲಾಗುವುದು.

### ಸುದ್ದಿ–ಸೂಚನೆ

- ಶ್ರೀಮತಿ. ಪೂರ್ಣಿಮಾ ಪರುಲೇಕರ್ ಅವರಿಂದ ಮರಾಠಿ ಭಾಷೆಗೆ ಅನುವಾದಿತವಾಗಿರುವ "Channelled Knowledge from the Rishis" ಪುಸ್ತಕವನ್ನು ಹಾಗೂ ಶ್ರೀ. ಶಿವಪ್ರಕಾಶ್ ಅವರಿಂದ ಕನ್ನಡ ಭಾಷೆಗೆ ಅನುವಾದಿತವಾಗಿರುವ "iGuruji" ಪುಸ್ತಕವನ್ನು 1–2–2009 ರಂದು ಬಿಡುಗಡೆ ಮಾಡಲಾಗುತ್ತದೆ
- ಸುಮಾರು 150 ಸಾಧಕರು 31–12–2008 ರಂದು ತಪೋನಗರದಲ್ಲಿ ಏರ್ಪಡಿಸಿದ್ದ ಅಖಂಡ ಧ್ಯಾನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅಂದು ರಾತ್ರಿ 12ಘಂಟೆಗೆ ತಪೋನಗರ ನಿವಾಸಿಗಳು ಗುರೂಜಿಯವರೊಡಗೂಡಿ ಹೊಸವರ್ಷವನ್ನು ಸ್ವಾಗತಿಸಿದರು.

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 02 | ಸೋಮ | ರಥಸಪ್ತಮಿ |
| 03 | ಮಂಗಳ | ಶುಕ್ಲ ಅಷ್ಟಮಿ |
| 05 | ಗುರು | ಶುಕ್ಲ ದಶಮಿ |
| 09 | ಸೋಮ | ಪೂರ್ಣಿಮಾ<br>ಚಂದ್ರಗ್ರಹಣ ಸಂಜೆ6.08 ರಿಂದ<br>ರಾತ್ರಿ 10.07 ರವರೆಗೆ |
| 17 | ಮಂಗಳ | ಕೃಷ್ಣ ಅಷ್ಟಮಿ |
| 23 | ಸೋಮ | ಮಹಾಶಿವರಾತ್ರಿ |
| 24 | ಮಂಗಳ | ಅಮಾವಾಸ್ಯೆ |

### ಭಾನುವಾರದ ಪ್ರಸಾದವನ್ನು ಪ್ರಾಯೋಜಿಸಿದವರು

| | |
|---|---|
| 7–12–08 | ಸ್ಮಿತಾಗಿರಿ ಮತ್ತು ಬ್ರಜಬಂಧುಮಿತ್ರ |
| 14–12–08 | ಮುಂಬೈ ಮತ್ತು ಅಮೆರಿಕಾದ ಇಬ್ಬರು ಹಿತೈಷಿಗಳು |
| 21–12–08 | ಎಮ್. ಚಂದ್ರಶೇಖರ್ ಮತ್ತು ಸುರೇಶ್ ಟೆಂಡುಲ್ಕರ್ |
| 28–12–08 | ಎಲ್.ವಿ. ಸತ್ಯಭಾಮ, ಉಮೇಶ್ ಎಸ್.ಕೆ. ಮತ್ತು ಭಾರತಿ ಕೆ.ಆರ್. |

**ಈ ತಿಂಗಳ ವಾರ್ತಾಪತ್ರಿಕೆಗಳನ್ನು ಪ್ರಾಯೋಜಿಸಿದವರು ಶ್ರೀ. ವಿಜಯಕುಮಾರ್, ಶ್ರೀ ಎಸ್. ಬಾಲಕೃಷ್ಣನ್ ಮತ್ತು ಪುಣೆಯ ಒಬ್ಬ ಹಿತೈಷಿ**

**"ತಪೋವಾಣಿ"ಯ ಮುದ್ರಣಕ್ಕೆ ರೂ. 5000 ಮತ್ತು ಭಾನುವಾರದ ಪ್ರಸಾದವನ್ನು ಪ್ರಾಯೋಜಿಸುವುದಕ್ಕೆ ರೂ. 2000.**

### ಈ ತಿಂಗಳು ತಪೋನಗರದಲ್ಲಿ

| | |
|---|---|
| ಫೆಬ್ರವರಿ 1 | ಅಮರ ಜಯಂತಿ: ಬೆಳಿಗ್ಗೆ 11ಕ್ಕೆ |
| ಭಾನುವಾರಗಳು | ಬೆಳಿಗ್ಗೆ 11 ರಿಂದ 12ವರೆಗೆ |
| ಉಪನ್ಯಾಸಗಳು: | ವಿಶೇಷ ಧ್ಯಾನ:<br>ಮಧ್ಯಾಹ್ನ 12 ರಿಂದ 1ರವರೆಗೆ |
| ಶುಕ್ರವಾರಗಳು | ಲೈಟ್ ಚಾನೆಲ್: ಬೆಳಿಗ್ಗೆ 11 ರಿಂದ ಮಧ್ಯಾಹ್ನ 1ರವರೆಗೆ |
| ಫೆಬ್ರವರಿ 23 | ಮಹಾಶಿವರಾತ್ರಿ ವಿಶೇಷ ಧ್ಯಾನ:<br>ಮಧ್ಯಾಹ್ನ 12 ರಿಂದ 1ರವರೆಗೆ |

### ಅಮರ ಜಯಂತಿ

**ಕಾರ್ಯಕ್ರಮ**

**1–2–2009, ಭಾನುವಾರ**

| | |
|---|---|
| ಬೆಳಿಗ್ಗೆ 11 | ಓಂಕಾರ |
| | ಸ್ವಾಗತ |
| | ಭಾಷಣಗಳು |
| | ಗುರೂಜಿಯವರಿಂದ ಸಂದೇಶ |
| | ಪುಸ್ತಕಗಳ ಬಿಡುಗಡೆ |
| | ವಿಶೇಷ ಧ್ಯಾನ |
| | ಗುರೂಜಿಯವರಿಂದ ಆಶೀರ್ವಾದಗಳು |
| ಮಧ್ಯಾಹ್ನ 12.30 | ಪ್ರಸಾದ |

### ತಪೋನಗರ ಡೈರಿ

ಡಿಸೆಂಬರ್ ತಿಂಗಳು 2008ಕ್ಕೆ ಅದ್ಭುತ ಬೀಳ್ಕೊಡುಗೆಯಾಗಿತ್ತು. ತಪೋನಗರದಲ್ಲಿ ಹೊಸದಾಗಿ ನಿರ್ಮಿಸಲಾದ ಮಕ್ಕಳ ಪಾರ್ಕನ್ನು ನಮ್ಮ ಹಳ್ಳಿಯ ಮಕ್ಕಳು ತಾವೇ ಉದ್ಘಾಟನೆ ಮಾಡಿಕೊಂಡರು. ಅವರ ನಗುವಿನ, ಕೂಗಾಟ, ಕೇಕೆಗಳು ತಪೋನಗರದಲ್ಲೆಲ್ಲಾ ಮಾರ್ದನಿಸುತ್ತವೆ.

ಜಪಾನಿನಿಂದ ನಾಲ್ಕು ಸಾಧಕರು ಸ್ವಲ್ಪಕಾಲದ ಭೇಟಿಗಾಗಿ ತಪೋನಗರಕ್ಕೆ ಬಂದಿದ್ದರು. ನಾವೆಲ್ಲರೂ ಅವರ ಸರಳತೆ, ಸೌಜನ್ಯ, ವಿನಯಗಳಿಗೆ ಮಾರುಹೋದೆವು. ಗುರುಜಿಯವರು ಹೇಳು ವುದನ್ನೆಲ್ಲಾ ಅವರು ಬಹು ಸುಲಭವಾಗಿ ಮೈಗೂಡಿಸಿ ಕೊಳ್ಳುವಂತಿತ್ತು. ಸಾಂಸ್ಕೃತಿಕ, ಭಾಷಾ ಕಂದಕಗಳು ಗುರೂಜಿಯವರ ದಿವ್ಯಪ್ರೀತಿಯ ಬೆಳಕಿನಲ್ಲಿ ಕರಗಿಹೋಗಿದ್ದವು. ಆಧ್ಯಾತ್ಮಿಕ ಸಂಬಂಧಗಳಲ್ಲಿ ಈ ತೊಡಕುಗಳಾವುವೂ ಇರುವುದಿಲ್ಲ ಎಂಬ ಸತ್ಯಕ್ಕೆ ನಿದರ್ಶನದಂತಿತ್ತು ಅವರ ಭೇಟಿ.

ಒಂದು ದೊಡ್ಡಗುಂಪಿನ ಸಾಧಕರಿಗೆ ಐಗುರೂಜಿ ವಿಚಾರಕೂಟವನ್ನು ಅಂತರ್‌ಮಾನಸದಲ್ಲಿ ಏರ್ಪಡಿಸಿತ್ತು.

ಶೂನ್ಯಮಾಸದ ಆಗಮನದೊಂದಿಗೆ ಋಷಿಗಳ ಒಂದು ಹೊಸ ತಂಡವು ನವೀನ ಚೈತನ್ಯಗಳೊಂದಿಗೆ ಭೂಮಿಗೆ ಆಗಮಿಸಿತು.

ಡಿಸೆಂಬರ್ 31ರ 'ಅಖಂಡ ಧ್ಯಾನ' ಸಾಧಕರಿಗೆ ಸತತ 12ಘಂಟೆಗಳ ಕಾಲ ಧ್ಯಾನ ಮಾಡುವ ಅವಕಾಶವನ್ನು ಒದಗಿಸಿತು. ಈ 12ಘಂಟೆಗಳ ಕಾಲ ನಾವೆಲ್ಲರೂ ಬೆಳಕನ್ನು ಚಾನೆಲ್ ಮಾಡಿದೆವು. ತಪೋನಗರ ನಿವಾಸಿಗಳು ಗುರೂಜಿಯವರೊಂದಿಗೆ ರಾತ್ರಿ 12ಘಂಟೆಗೆ ಒಟ್ಟುಗೂಡಿ ಹೊಸವರ್ಷವನ್ನು ಸ್ವಾಗತಿಸಿದರು.

## ಮಹಾನ್ ಋಷಿ ಅಮರ

**ಶೋಭ ಕೆ.ರಾವ್, ಅನು: ಗುರುಪ್ರಸಾದ್**

ಹನ್ನೆರಡು ವರ್ಷದ ಬಾಲಕನಾಗಿದ್ದಾಗಲೇ ಋಷಿಯಾಗಿ, ಅಂದಿನಿಂದ ತಮ್ಮ ಕೊನೆಯುಸಿರಿರುವವರೆಗೆ ಸಪ್ತಋಷಿಗಳಿಗಾಗಿ ಕೆಲಸ ಮಾಡಿ, ಸೂಕ್ಷ್ಮ ಲೋಕಗಳಿಂದ ಈ ಭೂಮಂಡಲದ ಜನರಿಗಾಗಿ ಆಧ್ಯಾತ್ಮಿಕ ವಿಜ್ಞಾನದ ಜ್ಞಾನಭಂಡಾರವನ್ನೇ ತಂದ ಮಹಾಚೇತನ ಮಹರ್ಷಿ ಅಮರರವರು. ಅವರ ಮಹಾಸಮಾಧಿಯ ನಂತರ, ಗುರೂಜಿಯವರು ಅಮರರೊಡನೆ ಸತತ ಸಂಪರ್ಕದಲ್ಲಿದ್ದಾರೆ ಹಾಗೂ ಅವರ ಚಾನೆಲ್ ಆಗಿದ್ದಾರೆ. ಗುರೂಜಿಯವರ ಮುಖಾಂತರ ನಮ್ಮೆಲ್ಲರಿಗೂ ಈ ಗುರುತರ ಬದಲಾವಣೆಯ ಕಾಲಕ್ಕೆ ತಕ್ಕಂಥ ಜ್ಞಾನ ಮತ್ತು ಚೈತನ್ಯಗಳು ದೊರಕುತ್ತಿವೆ. ಈ ಭೂಮಿಯ ಪ್ರತಿಯೊಂದು ಜೀವಿಯನ್ನೂ ಸತ್ಯಯುಗಕ್ಕೆ ಕೊಂಡೊಯ್ಯುವ ಈ ಮಹತ್ತರ ಕಾರ್ಯ ಮಹರ್ಷಿ ಅಮರ ಮತ್ತು ಋಷಿಗಳ ನೇತೃತ್ವದಲ್ಲಿ ಮುಂದಿನ 400 ವರ್ಷಗಳವರೆಗೆ ನಡೆಯಲಿದೆ. ಇದು ಬಹಳ ಪ್ರಯಾಸಕರ ಹಾಗೂ ಕಠಿಣವಾದ ಕೆಲಸ ಏಕೆಂದರೆ ಬಹುತೇಕ ಜನರು ಸತ್ಯಯುಗದ ಮೌಲ್ಯಗಳನ್ನು ಸ್ವೀಕರಿಸಲು ಮತ್ತು ಪಾಲಿಸಲು ಸಿದ್ಧರಿಲ್ಲ.

ಅಮರರವರು ಬಹು ಅಪರೂಪದ ವ್ಯಕ್ತಿ, ಒಬ್ಬ ಮಹರ್ಷಿ. ಜೀವನದ ಇತರ ಅಂಗಗಳಷ್ಟೇ ಹಣವೂ ಕೂಡ ಮುಖ್ಯ ಎಂದು ನಂಬಿದವರು ಮತ್ತು ತಿಳಿಸಿಕೊಟ್ಟವರು. ಲೌಕಿಕ ಹಾಗೂ ಆಧ್ಯಾತ್ಮಿಕ ಎರಡರನ್ನೂ ಸರಿಸಮನಾಗಿ ಸಮನ್ವಗೊಳಿಸಿಕೊಳ್ಳುವಂತೆ, ದೈವತ್ವವನ್ನು ಜೀವನದಲ್ಲಿ ಎಲ್ಲ ಮಟ್ಟಗಳಲ್ಲಿ ವ್ಯಕ್ತಪಡಿಸುವಂತೆ ಒತ್ತಿಹೇಳಿದರು. ಅದರಂತೆ ತಮ್ಮ ಜೀವನವನ್ನು ಮಾದರಿಯಾಗಿ ನಡೆಸಿ ತೋರಿಸಿದರು.

ಪ್ರಳಯದ ಈ ಪರೀಕ್ಷಾಕಾಲದಲ್ಲಿ ಮನುಜಕುಲ ಬೆಳಕಿನ ಯುಗದತ್ತ ಚಲಿಸಲು, ಮಾನವರಲ್ಲಿ ಕಾಲಕಾಲಕ್ಕೆ ಅಗತ್ಯವಾದ ಬದಲಾವಣೆಗಳನ್ನು ಉಂಟುಮಾಡುವ ಸಲುವಾಗಿ, ಅಮರ ಮತ್ತು ಋಷಿಗಳು ಹೊಸ ಚೈತನ್ಯಗಳು ಮತ್ತು ಜ್ಞಾನವನ್ನು ನೀಡುತ್ತಾರೆ. ಕಾಲದ ಈ ಘಟ್ಟದಲ್ಲಿ ಅಮರರವರ ಸಂದೇಶವೇನೆಂದರೆ, “ನಾವೆಲ್ಲರೂ ನಮ್ಮೊಳಗಿರುವ ಬೆಳಕಿನೊಂದಿಗಿರಬೇಕು. ಬೆಳಕನ್ನು ಅನುಭವಿಸಬೇಕು. ಬೆಳಕನ್ನು ನಮ್ಮ ಸಂಗಾತಿಯನ್ನಾಗಿ ಮಾಡಿಕೊಳ್ಳಬೇಕು. ಬೆಳಕು ನಮ್ಮನ್ನು ಎಲ್ಲರೀತಿಯಲ್ಲೂ ಕಾಪಾಡುತ್ತದೆ ಏಕೆಂದರೆ ಬೆಳಕೇ ದೇವರು.” ಅಮರರವರ ಒಂದೊಂದು ನುಡಿಯೂ ಬೆಳಕಿನಿಂದ ತುಂಬಿದೆ ಏಕೆಂದರೆ ಅಮರರೇ ಬೆಳಕು. ▪

## ನಿಗೂಢ ಅಮರ


**ಶ್ಯಾಮಲಾದೇವಿ, ಅನು: ಗುರುಪ್ರಸಾದ್**

ಅವರು ಮಿತಭಾಷಿಗಳು. ಅವರು ಸಹಜವಾಗಿ ಮಾತನಾಡಿದರೂ ಅದೆಲ್ಲವೂ ಆಧ್ಯಾತ್ಮಿಕ ಮಹಾ ಸತ್ಯಗಳಂತಿದ್ದವು. ಅವರೆಂದೂ ವೇದಗಳನ್ನು ಓದುವುದಾಗಲಿ ಅಥವಾ ಅವುಗಳ ಬಗ್ಗೆ ಮಾತನಾಡುವುದಾಗಲಿ ಮಾಡಲಿಲ್ಲ, ಆದರೆ ವೇದಗಳಲ್ಲಿರುವ ಮಹಾಸತ್ಯಗಳನ್ನು ಬದುಕಿ ತೋರಿಸಿದರು. “ವೇದಗಳ ಬಹುಪಾಲು ಜ್ಞಾನ ಕಳೆದುಹೋಗಿದೆ. ಅಳಿದುಳಿದ ಜ್ಞಾನದ ಸಿಂಹಪಾಲು ಪೌರೋಹಿತ್ಯ ವರ್ಗಗಳಿಂದ, ತಮ್ಮ ಸ್ವಾರ್ಥ ಸಾಧನೆಗೆ ತಿರುಚಲ್ಪಟ್ಟು ವಿಕೃತವಾಗಿದೆ, ಉಳಿದಿರುವ ಪರಿಶುದ್ಧ ಜ್ಞಾನ ಚದುರಿಹೋಗಿದೆ. ಕಳೆದುಹೋಗಿರುವ ಜ್ಞಾನವನ್ನು ಪುನಃ ಗಳಿಸುವುದು, ವಿಕೃತ ಜ್ಞಾನವನ್ನು ಸರಿಪಡಿಸುವುದು, ಉಳಿದಿರುವ ಪರಿಶುದ್ಧ ಜ್ಞಾನಕ್ಕೆ ಹೊಸ ಜ್ಞಾನವನ್ನು ಮೇಲಿನ ಲೋಕಗಳಿಂದ ತರುವುದು ನಮ್ಮ ಹೊಣೆ” ಎಂದು ಅಮರರವರು ಹೇಳುತ್ತಿದ್ದರು.

ವೇದಗಳನ್ನೆಂದೂ ಅಧ್ಯಯನ ಮಾಡದ ಅವರು ವೇದಗಳ ಸ್ಥಿತಿಯ ಬಗ್ಗೆ ಅಷ್ಟೊಂದು ಅಧಿಕಾರಯುತವಾಗಿ ಹೇಗೆ ಮಾತನಾಡುತ್ತಿದ್ದರು? ವೇದಗಳನ್ನು ಪುನರುಜ್ಜೀವನಗೊಳಿಸಿ ಪುನಃ ಬರೆಯಬೇಕು ಎಂದು ಹೇಳಲು ಅವರಿಗೆ ಹೇಗೆ ಸಾಧ್ಯವಾಯಿತು? ಏಕೆಂದರೆ ಅವರೊಬ್ಬ ಮಹಾನ್ ಋಷಿ, ಮಹಾಜ್ಞಾನಿ ಆಗಿದ್ದರಲ್ಲದೆ, ಇಡೀ ಸೃಷ್ಟಿಯ ಮಾರ್ಗದರ್ಶಕರಾದ ಹಾಗೂ ಭಗವಂತನ ಪ್ರತಿನಿಧಿಗಳಾದ ಸಪ್ತಋಷಿಗಳೊಟ್ಟಿಗೆ ಕಾರ್ಯಪ್ರವೃತ್ತರಾದ ಅವರಿಗೆ ಸಪ್ತಋಷಿಗಳು ಜ್ಞಾನದ ‘ಮೂಲ.’

ಅವರು ಜೀವಮಾನವಿಡೀ ಸತತವಾಗಿ, ಸ್ವಲ್ಪವೂ ವಿಶ್ರಮಿಸದೆ ಮೌನವಾಗಿ ಋಷಿ–ಕಾರ್ಯಗಳಲ್ಲಿ ಭಾಗವಹಿಸಿದರು. ತಮ್ಮಲ್ಲಿದ್ದ ಅದ್ಭುತ ಶಕ್ತಿಗಳ, ಅಸಾಧಾರಣ ಹಾಗೂ ಅತಿಮಾನುಷ ಸಾಧನೆಗಳ ಹೊರತಾಗಿಯೂ ಅವರು ಪ್ರಚಾರ ಮಾಧ್ಯಮಗಳಿಂದ ದೂರ ಉಳಿದರು. ಋಷಿಕೇಂದ್ರ ಸ್ಥಾಪನೆಗೆ ಬೇಕಾದ ಎಲ್ಲ ಮುಂಚೂಣಿ ಕಾರ್ಯಗಳನ್ನು ಮಾಡಿದರಲ್ಲದೆ ತಮ್ಮ ಸಮಸ್ತ ಜ್ಞಾನನಿಧಿ ಮತ್ತು ಮುಂದಿನ ಕಾರ್ಯಭಾರವನ್ನು ತಮ್ಮ ಜನ್ಮಾಂತರ ಅನುವರ್ತಿ, ನಮ್ಮ ಗುರೂಜಿಯವರಿಗೆ ವರ್ಗಾಯಿಸಿದರು. ಅವರ ಮೌನ ಸಾಧನೆಗಳಿಗೆ ಈಗ ಗುರೂಜಿಯವರ ಸರ್ವಶ್ರೇಷ್ಠ ವ್ಯಕ್ತಿತ್ವ, ಮಾನಸ ಮತ್ತು ಅಂತರಮಾನಸಗಳಲ್ಲಿ ಅನೇಕ ಸ್ತರಗಳಲ್ಲಿ ಆಗುತ್ತಿರುವ ಅಗಾಧ ಕಾರ್ಯಗಳು ಸಾಕ್ಷಿಗಳಾಗಿವೆ.

ಸರ್ವವನ್ನೂ ಅರಿತವರಾದರೂ, ಪ್ರತಿಯೊಂದೂ ತನ್ನದೇ ಗತಿಯಲ್ಲಿ ಆಗಗೊಟ್ಟ ಅಮರ ನಿಜಕ್ಕೂ ನಿಗೂಢರು. ▪



## ಲೈಟ್ ಚಾನಲ್ಸ್

### ವಿಶ್ವ ಸಂಚಲನ

26–02–2009, ಗುರುವಾರ
ಸಂಜೆ 6–30 ಕ್ಕೆ
ಬೆಂಗಳೂರಿನಲ್ಲಿರುವ ಕೋರಮಂಗಲ
ಸ್ಟೇಡಿಯಂನಲ್ಲಿ ಏರ್ಪಡಿಸಿರುವ
ದೊಡ್ಡ ಸಮಾರಂಭದಲ್ಲಿ
ಸಂಜೆ 7–30 ರಿಂದ **7 ನಿಮಿಷಗಳ ಕಾಲ**
**ಬೆಳಕನ್ನು ಚಾನಲ್ ಮಾಡಲು**
**ಭಾಗವಹಿಸಿ.**

ಇದರಲ್ಲಿ ಯಾರು ಬೇಕಾದರೂ
ತಮ್ಮ ತಮ್ಮ ಜಾಗದಿಂದಲೇ
ಭಾಗವಹಿಸಬಹುದು.
**ಲಕ್ಷಾಂತರ ಜನ ಏಕ ಕಾಲದಲ್ಲಿ**
**ಭಾಗವಹಿಸಬಹುದು.**

ಮನೆಗಳಲ್ಲಿ, ಸ್ಕೂಲುಗಳಲ್ಲಿ,
ಸಭಾ ಭವನಗಳಲ್ಲಿ
ಗುಂಪುಗಳನ್ನು ಸೇರಿಸಿ ಈ ಸಮಯದಲ್ಲಿ
ಬೆಳಕನ್ನು ಚಾನೆಲ್ ಮಾಡಿ
ಈ ವಿಶ್ವ ಸಂಚಲನವನ್ನು ಬೆಳಸಿ

### ತಂತ್ರ

ಮೇಲೆ ಬೆಳಕಿನ ಸಮುದ್ರ ಇದೆ ಎಂದು ಊಹಿಸಿಕೊಳ್ಳಿ. ಬೆಳಕು ಇಳಿದು ಬಂದು, ನಮ್ಮನ್ನು ತುಂಬಿ ಸುತ್ತಲೂ ಹರಡಿ ಇಡೀ ಪ್ರಪಂಚವನ್ನು ತುಂಬುತ್ತದೆ ಎಂದು ಊಹಿಸಿಕೊಳ್ಳಿ.

1–2–2009 ರಿಂದ ಗುರೂಜಿಯವರು
ತಮ್ಮ ವೈಯಕ್ತಿಕ ಬ್ಲಾಗ್‌ಅನ್ನು
lightdivine.blogspot.com ನಲ್ಲಿ
ಲಾಂಚ್ ಮಾಡುತ್ತಿದ್ದಾರೆ.
ನಿಮಗೆ ಇಲ್ಲಿ ಸ್ವಾಗತ.

# ಗುರೂಜಿಯವರ ನುಡಿಗಳು

(ಸಂಗ್ರಹ: ರಾಘವೇಂದ್ರ ಸೋಮಯಾಜಿ, ಅನು: ಶಿವಪ್ರಕಾಶ್ ಎಲ್.)

### 07–12–2008

ಒಬ್ಬ ವ್ಯಕ್ತಿ, “ಬೆಳಕನ್ನು ಅನುಭವಿಸಿದ ನಂತರ ಜೀವನ ಹೇಗಿರುತ್ತದೆ?” ಎಂದು ನನ್ನನ್ನು ಪ್ರಶ್ನೆ ಮಾಡಿದರು. ನಾನು ಹೇಳುತ್ತೇನೆ, ಬುದ್ಧಿಶಕ್ತಿಯಿಂದ ಪ್ರಶ್ನಿಸುವ ಬದಲು ನಾವೇಕೆ ಪ್ರಯತ್ನಿಸಬಾರದು? ಕೇವಲ ಒಂದು ಸಲ ಬೆಳಕನ್ನು ಅನುಭವಿಸಿದರೆ ಸಾಕು, ನಮ್ಮ ಜೀವನ ಮೊದಲಿನಂತೆ ಇರುವುದಿಲ್ಲ. ಅನೇಕ ಸಂಗತಿಗಳು ಘಟಿಸುತ್ತವೆ. ಆದರೆ ಸಾಮಾನ್ಯವಾಗಿ ನನ್ನ ಕುಟುಂಬ, ನನ್ನ ಕೆಲಸ, ನನ್ನ ಆಸಕ್ತಿ ಮತ್ತು ಇತರ ವಿಷಯಗಳ ಬಗ್ಗೆಯೇ ಯೋಚಿಸುತ್ತೇವೆ. ಆದರೆ ಒಮ್ಮೆ ಬೆಳಕನ್ನು ಅನುಭವಿಸಿದರೆ ನಾವು ಹೀಗೆ ಮಾಡಲು ಸಾಧ್ಯವಾಗದು. ನಾವು ವಿಶ್ವಕುಟುಂಬಿಗಳಾಗುತ್ತೇವೆ. ಆಗ ನಮ್ಮ ಆಲೋಚನೆಗಳು, ಭಾವನೆಗಳು ಮತ್ತು ನಮ್ಮ ಪ್ರಕ್ರಿಯೆಗಳು ವಿಶ್ವಮಟ್ಟದ್ದಾಗಿರುತ್ತವೆ.

ನಾವು ಬೆಳಕನ್ನು ಅನುಭವಿಸಿದಾಗ ವಿಶ್ವದ ಬೆಳಕು–ದೇವರೊಂದಿಗೆ ಸಂಪರ್ಕ ಪಡೆಯುತ್ತೇವೆ. ಆಗ ದೇವರಲ್ಲಿ ಇರುವುದೆಲ್ಲವು ನಮ್ಮದಾಗುತ್ತದೆ; ಅವನ ಶಕ್ತಿ, ವಿವೇಕ ಮತ್ತು ಪ್ರೇಮಗಳನ್ನು ಹೊಂದುತ್ತೇವೆ. ಪ್ರೇಮ ಮತ್ತು ಬೆಳಕು ನಮ್ಮ ಸುತ್ತ ಮುತ್ತ ಎಷ್ಟಿರುತ್ತದೆ ಎಂದರೆ ಯಾರೊಂದಿಗೂ ಘರ್ಷಣೆಗಳಿರುವುದಿಲ್ಲ. ಆದ್ದರಿಂದಲೇ ನಾವು ಮೊದಲಿನಂತೆ ಇರಲು ಆಗುವುದಿಲ್ಲ.

ನಾವು ಹೊಸಯುಗವನ್ನು ಪ್ರವೇಶಿಸಬೇಕಾದರೆ ಸಂಪ್ರದಾಯ ಶರಣತೆಯನ್ನು ಕಿತ್ತೆಸೆಯಬೇಕು. ಸಂಪ್ರದಾಯ ಶರಣತೆ ಎಂದರೇನು? ಅದು ಕುರುಡು ಮತಾಚರಣೆ ಮತ್ತು ಮೂಢನಂಬಿಕೆಗಳು. ಇದನ್ನು ಏಕೆ ಕಿತ್ತೊಗೆಯಬೇಕು? ಸಂಪ್ರದಾಯ ಶರಣತೆ. ನಮ್ಮನ್ನು ಅಂಧರನ್ನಾಗಿಸುತ್ತದೆ. ಅದು ನಮ್ಮನ್ನು ಯಾವಾಗಲೂ ಅಜ್ಞಾನದಲ್ಲಿರಿಸುತ್ತದೆ. ಸಂಪ್ರದಾಯ ಶರಣತೆ ಎನ್ನುವುದು ಕತ್ತಲೆ. ಹೊಸಯುಗದಲ್ಲಿ ಸಂಪ್ರದಾಯ ಶರಣತೆ ಇಲ್ಲವೇ ಇಲ್ಲ. ಮೂಢನಂಬಿಕೆ ಇರುವುದಿಲ್ಲ. ಅಲ್ಲಿ ಅರ್ಥವಂತಿಕೆ, ಜಾಗೃತಿ ಇರುತ್ತದೆ.

ಇತ್ತೀಚಿನ ಮುಂಬೈನ ದಾಳಿಗಳಿಂದ ದೊರೆತಿರುವ ಪಾಠಗಳೇನು? ಪರಿಶುದ್ಧವಾದ ಆಧ್ಯಾತ್ಮಿಕ ದೃಷ್ಟಿಕೋನದಿಂದ ದೊರೆಯುವ ಪಾಠಗಳೆಂದರೆ, ನಾವೆಲ್ಲ ಏಕತೆ ಮತ್ತು ಪ್ರೇಮದಿಂದ ಕೂಡಿರಬೇಕೆಂಬುದು. ಪ್ರೇಮ ಮಾತ್ರ ನಮ್ಮನ್ನು ರಕ್ಷಿಸುತ್ತದೆ. ನಾವು ಯಾವುದಾದರೂ ಒಂದು ಮೂಲೆಯಲ್ಲಿ ಕುಳಿತು ಗಾಢವಾಗಿ ಆಲೋಚಿಸಿ, ಮನಗಾಣಬೇಕು. ಮುಂಬೈ ಒಗ್ಗಟ್ಟಿನಿಂದ ಕೂಡಿದ್ದರೆ ಯಾರೂ ದಾಳಿ ಮಾಡಲು ಆಗುತ್ತಿರಲಿಲ್ಲ. ಅಲ್ಲಿಯ ಜನರು ತಮ್ಮೊಳಗೆ ಬೆಳಕು ಮತ್ತು ಪ್ರೇಮಗಳನ್ನು ಹೊಂದಿದ್ದಾರೆ. ಆದರೆ ಒಟ್ಟಾರೆಯಾಗಿ ಇದು ಮುಂಬೈಯನ್ನು ರಕ್ಷಿಸಲು ಸಾಕಾಗಲಿಲ್ಲ. ನಾವು ಹೆಚ್ಚು ಪ್ರೇಮವನ್ನು, ತಾಳ್ಮೆಯನ್ನು ಮತ್ತು ಹೊಂದಾಣಿಕೆಯನ್ನು ಪಡೆಯಬೇಕಾಗಿದೆ.

### 14–12–2008

ಒಬ್ಬ ಗುರು ಅನೇಕ ಅಪಾಯಗಳನ್ನು ತೆಗೆದುಕೊಳ್ಳುತ್ತಾರೆ. ಒಂದು ಮಗು ತಪ್ಪು ಮಾಡಿದರೆ ತಂದೆ ತಾಯಿ ಕುರುಡು ಪ್ರೀತಿಯಿಂದ ಸಂತೋಷ ಪಡಬಹುದು ಮತ್ತು ಅದನ್ನು ತಿದ್ದದೇ ಇರಬಹುದು. ಆದರೆ ಒಬ್ಬ ಗುರು ವಿದ್ಯಾರ್ಥಿಯ ತಪ್ಪನ್ನು ಲಕ್ಷಿಸದಿರಲು ಸಾಧ್ಯವಿಲ್ಲ. ಅವರು ತಿದ್ದದೇ ಹೋದರೆ, ವಿದ್ಯಾರ್ಥಿ ಹೇಗೆ ತಾನೆ ಕಲಿಯಲು ಸಾಧ್ಯ? ಆದರೆ ಇಲ್ಲಿರುವ ಅಪಾಯವೆಂದರೆ ಯಾರೂ ತಮ್ಮ ತಪ್ಪನ್ನೆತ್ತಿ ತೋರಿಸುವುದನ್ನು ಇಷ್ಟಪಡುವುದಿಲ್ಲ. ವಿದ್ಯಾರ್ಥಿ ಕೋಪಗೊಂಡು ಹೊರಟುಹೋಗಬಹುದು. ಒಬ್ಬ ವಿದ್ಯಾರ್ಥಿ ಹೊರಟುಹೋದರೆ, ಗುರು ಆ ವಿದ್ಯಾರ್ಥಿ ಹಿಂತಿರುಗಿ ಬರಬಹುದೆಂದು ನಿರೀಕ್ಷಿಸುತ್ತಾರೆ ಮತ್ತು ಪ್ರೇಮವನ್ನು ಕಳುಹಿಸುತ್ತಲೇ ಇರುತ್ತಾರೆ. ನಿಜವಾದ ಶಿಷ್ಯನಾದವನು ಮುಂದಿನ ವರ್ಷದಲ್ಲಿ ಅಲ್ಲವಾದರೂ ಮುಂದಿನ ಜನ್ಮದಲ್ಲಿಯಾದರೂ ಹಿಂದಿರುಗಿ ಬರುತ್ತಾನೆ.

ಒಂದು ಸಮಸ್ಯೆಗೆ ಪರಿಹಾರ ನೀಡಿದಾಗ ಅಥವಾ ಅದನ್ನು ಪರಿಹರಿಸಿದರೆ, ಗುರು ಆ ಕರ್ಮದ ಒಂದು ಭಾಗವನ್ನು ತಾವೇ ಸ್ವ–ಇಚ್ಛೆಯಿಂದ, ಪ್ರೇಮದಿಂದ ಅನುಭವಿಸುತ್ತಾರೆ. ಆದರೆ ಈ ಕರ್ಮಗಳು ಬಲವಾಗಿದ್ದರೆ, ಪ್ರತಿಕೂಲ ಪರಿಣಾಮ ಉಂಟಾಗುತ್ತದೆ. ಗುರು ಆದವರು ತೆಗೆದುಕೊಳ್ಳಬೇಕಾದ ಅಪಾಯವಿದು.

ಒಬ್ಬ ಗುರು ಸಹಜವಾಗಿಯೇ ತಮ್ಮ ವಿದ್ಯಾರ್ಥಿಗಳಲ್ಲಿ ಸಂಪೂರ್ಣ ನಂಬಿಕೆಯನ್ನು ಇಡುತ್ತಾರೆ. ಆದರೆ ಕೆಲವು ಸಲ ಅವರ ನಂಬಿಕೆಗೆ ಘಾತವಾಗುವುದಲ್ಲದೆ, ಮೋಸಗೊಳಿಸಲ್ಪಡುತ್ತಾರೆ. ಇದು ಖಚಿತವಾಗಿ ಅವರ ಮೇಲೆ ಪರಿಣಾಮ ಬೀರುತ್ತದೆ. ಏಕೆಂದರೆ ಗುರು ಕೂಡಾ ಮಾನವ ಜೀವಿಯಲ್ಲವೆ! ಆದರೆ ಅವರು ಜನರಲ್ಲಿ ವಿಶ್ವಾಸವನ್ನಿಡುತ್ತಲೇ ಹೋಗುತ್ತಾರೆ. ಹಾಗೆ ಮಾಡುವುದು ಅವರ ಸ್ವಭಾವ. ಇಲ್ಲವಾದರೆ ಅವರು ಗುರುವೆನಿಸಲು ಸಾಧ್ಯವಿಲ್ಲ.

ನಾನು ಜನರೊಂದಿಗೆ ಮಾತನಾಡುವಾಗ ಕೆಲವು ಸಲ ಗೋಡೆಯೊಂದಿಗೆ ಮಾತನಾಡಿದಂತಾಗುತ್ತದೆ. ಅವರು ಅರ್ಥಮಾಡಿಕೊಳ್ಳಲಾಗದೆ ಸುಮ್ಮನೆ ದಿಟ್ಟಿಸಿ ನೋಡುತ್ತಾರೆ. ಆದರೆ ಗೋಡೆಯನ್ನು ಒಡೆದು ಹಾಕುವ ಕೆಲಸ ನಾನು ಮಾಡಬೇಕಾಗುತ್ತದೆ. ಇಂಥ ಸಂದರ್ಭಗಳಲ್ಲಿ ನನಗೆ ಎದುರಾಗುವ ಪ್ರಶ್ನೆಗಳೆಂದರೆ– “ನಾವು ಯಾವುದಕ್ಕಾಗಿ ಕಾಯುತ್ತಿದ್ದೇವೆ? ಹೊಸಯುಗಕ್ಕೆ ಎಂದು ಸಿದ್ಧರಾಗುತ್ತೇವೆ? ಫೋಟಾನ್ ಬೆಲ್ಟ್ ಪ್ರವೇಶಿಸಲು ಎಂದು ಸಿದ್ಧರಾಗುತ್ತೇವೆ?” ಕಲಿಯುಗ ಮುಗಿಯಲು ಇನ್ನೂ ನಾಲ್ಕು ಲಕ್ಷವರ್ಷಗಳಿಲ್ಲ. ನಾವು ನಂಬಲಿ, ಬಿಡಲಿ, ಕಲಿಯುಗ ಆಗಲೆ ಮುಗಿದಿದೆ. ಇನ್ನೂ ನಮ್ಮ ಮನೆಯ ಹಿತ್ತಲಲ್ಲಿಯೇ ಭೂಕಂಪ ವಾಗುವುದಕ್ಕಾಗಿ ಕಾಯುತ್ತಿದ್ದೇವೆಯೇ?

ಹೇಗೋ ನಾವು ಯಾವಾಗಲೂ, ಆಗುವುದೆಲ್ಲ ಬೇರೆಯವರಿಗೆ ಮಾತ್ರ ಎಂದು ಭಾವಿಸುತ್ತೇವೆ. ನಮಗೆ ಏನೂ ಆಗುವುದಿಲ್ಲ ಎಂದುಕೊಳ್ಳುತ್ತೇವೆ. ನಾವೆಲ್ಲ ಫೋಟಾನ್ ಬೆಲ್ಟ್ ಪ್ರವೇಶಿಸಬೇಕಾಗಿದೆ. ನಾವು ಸಿದ್ಧವಾಗದಿದ್ದಲ್ಲಿ ಅದು ಬಲವಾಗಿ ನಮಗೆ ಅಪ್ಪಳಿಸುತ್ತದೆ. ಈಗಿನಿಂದಲೇ ನಾವೇಕೆ ಸಿದ್ಧತೆಗೆ ತೊಡಗಬಾರದು? ನಾವು ಹೇಗೆ ಸಿದ್ಧವಾಗುವುದು? ಬೆಳಕು ನಮ್ಮ ಮೂಲಕ ಕೆಲಸ ಮಾಡುವಂತೆ ನಾವು ಸಿದ್ಧತೆ ಮಾಡಿಕೊಳ್ಳಬೇಕಾಗಿದೆ.

### 28–12–2008

ಕೆಲವು ಸಲ ಜನರು ತಮ್ಮ ಹೃದಯದ ವೇದನೆಯೆಲ್ಲವನ್ನು ನನ್ನಲ್ಲಿ ಹೇಳಿಕೊಳ್ಳುತ್ತಾರೆ. ಅವು ನನಗೆ ಮನ ನೋಯುವ ತಲ್ಲಣಗೊಳಿಸುವ ವಿಷಯಗಳಾಗಿವೆ. ಒಬ್ಬ ವ್ಯಕ್ತಿಗೆ ಕೆಲಸವಿಲ್ಲ, ಇನ್ನೊಬ್ಬರ ಮೂತ್ರಪಿಂಡಗಳು ವಿಫಲವಾಗಿವೆ, ಒಬ್ಬ ವ್ಯಕ್ತಿ ಕ್ಯಾನ್ಸರ್‌ನಿಂದ ನರಳುತ್ತಿದ್ದರೆ, ಇನ್ನೊಬ್ಬರು ತಮ್ಮ ಸಂಗಾತಿಯನ್ನು ಕಳೆದು ಕೊಂಡಿದ್ದಾರೆ, ಮತ್ತೊಬ್ಬರು ಈ ನಿರ್ದಯ ಜಗತ್ತನ್ನು ಎದುರಿಸಬೇಕಾಗಿರುವುದು.... ಇತ್ಯಾದಿ.

ಇಂಥ ಸಮಯಗಳಲ್ಲಿ ನಾನು ಅವರಂತೆಯೇ ನಿಸ್ಸಹಾಯಕ. ನನ್ನಲ್ಲಿ ಯಾವ ಮಾಂತ್ರಿಕ ಶಕ್ತಿಯೂ ಇಲ್ಲ. ಈ ಸಮಸ್ಯೆಗಳನ್ನು ಮಾಯ ಮಾಡುವಂತಹ ಶಕ್ತಿ ನನ್ನಲ್ಲಿ ಇಲ್ಲ. ಗುರುವಿನ ಕೆಲಸ ಬಹಳ ನೋವಿನಿಂದ ಕೂಡಿದುದು. ಆದರೆ ನೀವು ನನ್ನಲ್ಲಿ ವಿಶ್ವಾಸವನ್ನಿಡುವುದಾದರೆ ನಾನು ಎಲ್ಲ ಪರಿಹಾರಗಳ ಮೂಲವನ್ನು ತಲುಪಲು ಸಹಾಯ ಮಾಡುತೇನೆ. ಗುರುವಿನೊಡನೆ ಸಂಬಂಧ ಪ್ರಾರಂಭವಾಗುವುದೇ ವಿಶ್ವಾಸದಿಂದ. ನೀವು ನನ್ನಲ್ಲಿ ವಿಶ್ವಾಸವನ್ನಿಡುವುದು ಮಾತ್ರವಲ್ಲ ನನ್ನನ್ನು ಅನುಸರಿಸಬೇಕಾಗುತ್ತದೆ. ಒಬ್ಬ ನಿಜವಾದ ಗುರು ತಪ್ಪುದಾರಿಗೆಳೆಯುವುದಿಲ್ಲ. ಒಂದು ಮುಗ್ಧ ಮಗುವಿನಂತೆ ನನ್ನನ್ನು ನೀವು ಅನುಸರಿಸಿದರೆ ಬೆಳಕಿನೆಡೆಗೆ ಕರೆದೊಯ್ಯಬಲ್ಲೆ. ಬೆಳಕು ಒಂದು ಸಂಗಾತಿ, ಮಾರ್ಗದರ್ಶಿ ಮತ್ತು ಗುರುವೂ ಆಗಿದೆ.

ಬೆಳಕು ಮಹತ್ತರ ಬುದ್ಧಿಶಕ್ತಿ, ಪ್ರೇಮ ಮತ್ತು ವಿವೇಕಗಳನ್ನು ಹೊಂದಿದೆ. ಕೆಲವು ಸಲ ಬೆಳಕು ನಮ್ಮ ಸಮಸ್ಯೆಗಳನ್ನು ತಕ್ಷಣವೇ ಪರಿಹರಿಸುತ್ತದೆ. ಆದರೆ ಇನ್ನು ಕೆಲವು ಸಲ ಬೆಳಕು ಸಮಸ್ಯೆಗಳನ್ನು ಮುಂದುವರಿಯಲು ಬಿಡುತ್ತದೆ. ಆಗ ನಾವು ಈ ವಿವೇಕವನ್ನು, ಈ ಸೃಷ್ಟಿಯಲ್ಲಿ ಅತ್ಯಂತ ಮಹತ್ವವುಳ್ಳ ವಿವೇಕವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ನಮಗೆ ಏನನ್ನು ಕೊಟ್ಟಿದೆಯೋ ಅದಕ್ಕೆ ನಾವು ಒಪ್ಪಿಕೊಂಡು ಮುಗುಳ್ನಗುತ್ತ ಮುನ್ನಡೆಯಬೇಕು.

ಇದು ನಮ್ಮ ಕಣ್ಣೀರನ್ನು ಒರೆಸುವ ಕಾಲ. ನಾವು ದೇವರ ಬಳಿಗೆ ಹೋಗಲು ಪ್ರಯತ್ನಿಸದೇ ಹೋದರೂ ದೇವರೇ ನಮ್ಮ ಬಳಿಗೆ ಬರುತ್ತಾನೆ. ಅವನು ನೇರವಾಗಿ ಮಧ್ಯೆ ಪ್ರವೇಶಮಾಡಿ ನಮ್ಮ ಜೀವನ ಪಥವನ್ನು ಸರಿಪಡಿಸಲು ಪ್ರಯತ್ನಿಸುತ್ತಾನೆ, ನಾವು ಬಯಸಿದರೆ ಮಾತ್ರ. ಅವನು ನಮಗೆ ಸಹಾಯ ಮಾಡುವುದಲ್ಲದೆ, ನಾವು ಅನುಭವಿಸಿರುವ ಕಷ್ಟಕ್ಕೆ ಪ್ರತಿಯಾಗಿಯೋ ಎಂಬಂತೆ ಅನೇಕ ಕಾಣಿಕೆಗಳ ಸುರಿಮಳೆಯನ್ನು ಕರೆಯುತ್ತಾನೆ. ಈಗಾಗಲೇ ಈ ಕಾಣಿಕೆಗಳ ಸುರಿಮಳೆ ಬರುತ್ತಿದೆ. ನಮ್ಮನ್ನು ನಾವು ತೆರೆದುಕೊಂಡು ಇವುಗಳನ್ನು ಸ್ವೀಕರಿಸಲು, ಪ್ರಶಸ್ತವಾದ ಕಾಲವಿದು.

## ಭಾನುವಾರದ ಉಪನ್ಯಾಸಗಳು

(ಸಂಗ್ರಹ: ದೇವಿಲತಾ, ಅನು: ವಿಶ್ವನಾಥ್ ಎಂ.ಎನ್.)

### 07–12–08

ಪುಸ್ತಕಗಳು ಚೈತನ್ಯಗಳನ್ನು ಹೊಂದಿರುತ್ತವೆ. ಅದು ಯಾವ ರೀತಿಯವೆಂಬುದು ಪುಸ್ತಕದ ವಿಷಯವನ್ನು ಆಧರಿಸಿರುತ್ತದೆ. ಆಧ್ಯಾತ್ಮಿಕ ಗುರುವೊಬ್ಬರ ಬದುಕು–ಬೋಧನೆಗಳಿಗೆ ಸಂಬಂಧಿಸಿದ ಪುಸ್ತಕವಾಗಿದ್ದರೆ ಅದು ಅವರ ಚೈತನ್ಯಗಳಿಗೆ ನಮ್ಮನ್ನು ಸಂಪರ್ಕಿಸುತ್ತದೆ. ಕೆಲವು ಪುಸ್ತಕಗಳಲ್ಲಿ ಅಪಾರವಾದ ಪ್ರೀತಿ–ಶಾಂತಿಗಳಿದ್ದು, ಜನರು ಇಂಥ ಪುಸ್ತಕಗಳಿಗೆ ಪ್ರಯತ್ನಪೂರ್ವಕವಾಗಿ ಶೃತಿಗೊಳ್ಳಲು ಪ್ರಯತ್ನಿಸಿದಾಗ ಇವುಗಳನ್ನು ಅನುಭವಿಸುತ್ತಾರೆ.

ಅನೇಕರು ಮನಃಶಾಂತಿಯನ್ನು ಪಡೆಯುವುದಕ್ಕಾಗಿ ಧ್ಯಾನಾಭ್ಯಾಸವನ್ನು ಕೈಗೆತ್ತಿಕೊಳ್ಳುತ್ತಾರೆ. ಶಾಂತಿಯೆಂದರೆ ಯಾವುದೇ ಗಲಾಟೆ, ಸಮಸ್ಯೆ ಅಥವಾ ಕಠಿಣ ಪರಿಶ್ರಮವಿಲ್ಲದ ಸ್ಥಿತಿಯಲ್ಲ. ಎಂಥ ಕಠಿಣ ಪರಿಸ್ಥಿತಿಯಲ್ಲೂ ನಮ್ಮೊಳಗಿನ ನೆಮ್ಮದಿಯನ್ನು ಕಳೆದುಕೊಳ್ಳದಿರುವುದೇ ಶಾಂತಿ. ಅದು ನಮ್ಮೊಳಗನ್ನು ಅವಲಂಬಿಸಿದೆಯೇ ಹೊರತು ನಮ್ಮ ಪರಿಸರವನ್ನಲ್ಲ.

ವಿಶ್ವಶಾಂತಿ ಪ್ರಾರಂಭವಾಗಬೇಕಾಗಿರುವುದು ಪ್ರತಿಯೊಬ್ಬ ವ್ಯಕ್ತಿಯಿಂದ. ನಮ್ಮ ನಿತ್ಯದ ಚಟುವಟಿಕೆಗಳಲ್ಲಿ ಒಂದು ಸಮತೋಲನವನ್ನು ತರಲು ಪ್ರಾರಂಭಿಸುವ ಮೂಲಕ ಈ ಅಂತರಂಗದ ಶಾಂತಿಯ ಹುಡುಕಾಟ ಪ್ರಾರಂಭವಾಗುತ್ತದೆ. ಪ್ರಜ್ಞಾಪೂರ್ವಕವಾಗಿ, ನಾವು ಏನಲ್ಲ ಎನ್ನುವುದನ್ನು ಅರ್ಥಮಾಡಿಕೊಂಡು, ಆ ವ್ಯಕ್ತಿತ್ವವನ್ನು ಕೈಬಿಟ್ಟಾಗ ಈ ಅಂತರ್ಯುದ್ಧವನ್ನು ಗೆದ್ದು, ನಾವು ಮನಃಶಾಂತಿಯನ್ನು ಪಡೆಯುತ್ತೇವೆ. –ಕಾರ್ತಿಕ್ ಸಿ.

### 14–12–08

ನಮ್ಮ ಸುತ್ತಮುತ್ತ ಎಷ್ಟೇ ನಕಾರಾತ್ಮಕತೆ ಇದ್ದರೂ ಅನೇಕ ಉತ್ತಮ ಘಟನೆಗಳು, ಗುಣಾತ್ಮಕ ಚಟುವಟಿಕೆಗಳು ಸಂಭವಿಸುತ್ತಿರುವುದನ್ನು ನಾವು ಗಮನಿಸುತ್ತಿದ್ದೇವೆ. ಸತ್ಯಯುಗದ ಅಲೆಗಳು ತಮ್ಮ ಕಾರ್ಯವನ್ನು ಪ್ರಾರಂಭಿಸಿವೆ.

ನಾವು ಗುರುವಿಗೆ ಶರಣಾದರೆ ನಮ್ಮ ಜೀವನದ ಗತಿಯೇ ಬದಲಾಗುತ್ತದೆ. ನಾವು ಗುಣಾತ್ಮಕ ಚೈತನ್ಯಗಳನ್ನು ಹೊಂದಿದ್ದರೆ ನಮ್ಮ ತೊಂದರೆಗಳೆಲ್ಲ ಕಣ್ಮರೆಯಾಗುತ್ತವೆ. ನಾವು ಶಾಂತಿಯಿಂದ ಬಾಳುತ್ತೇವೆ ಮತ್ತು ಯಾವ ಸವಾಲನ್ನಾದರೂ ನಿರ್ವಹಿಸುವ ವಿವೇಕ ನಮಗಿರುತ್ತದೆ. ನಾವು ಋಷಿಗಳ ಕೈಯೊಳಗಿನ ಸಾಧನ ಆಗುತ್ತೇವೆ ಮತ್ತು ಎಲ್ಲ ಕೆಲಸಗಳು ನಮ್ಮ ಮೂಲಕ ಋಷಿಗಳಿಂದ ಆಗುತ್ತವೆ. ನಮ್ಮ ಅಂತರಂಗದಲ್ಲಿನ ಬೆಳಕನ್ನು ಅನುಭವಿಸಿದಾಗ, ನಾವು ಎಲ್ಲೆಡೆ ಅದನ್ನು ಕೊಂಡೊಯ್ಯುವುದಾಗಿ ಗುರೂಜಿಯವರು ಹೇಳುತ್ತಾರೆ. ಇದು ಸಂಭವಿಸಿದಾಗ ನಮ್ಮ ದೇಹಗಳು ಬೆಳಕಿನ ದೇಹಗಳಾಗಿ ಬದಲಾಗುತ್ತವೆ.

ಧ್ಯಾನವೇ ಗೊತ್ತಿಲ್ಲದ ವ್ಯಕ್ತಿ ಬೆಳಕಿನ ಬಗ್ಗೆ ಮಾತನಾಡಿದರೆ ಅದು ಋಷಿಕಾರ್ಯದ ಪ್ರಭಾವವೇ. ಇತರ ಅನೇಕ ಮಾರ್ಗಗಳ ಜನರು ಬೆಳಕಿನ ಅನುಭವವನ್ನು ಪಡೆಯುತ್ತಿದ್ದಾರೆ. ಜ್ಯೋತಿಕಾರ್ಯಕರ್ತರು ಬೇಶರತ್ತಿನಿಂದ ಬೆಳಕನ್ನು ಹರಡುತ್ತಿರುವುದರ ಪರಿಣಾಮವಿದು.

–ಅಂಜಲಿ ಪಾಟೀಲ್

### 21–12–08

ಇತ್ತೀಚಿನ ದಿನಗಳಲ್ಲಿ ನಾವು 'ಬೆಳಕನ್ನು ಆರಿಸಿಕೊಳ್ಳುವ' ಬಗ್ಗೆ ಆಗಾಗ ಕೇಳುತ್ತಿದ್ದೇವೆ. ಬೆಳಕನ್ನು ಹೇಗೆ ಆಯ್ಕೆಮಾಡಿಕೊಳ್ಳುವುದು? ಈ ಆಯ್ಕೆಯನ್ನು ಮಾಡುವ ಅವಕಾಶ ನಮಗೆಂದು ಸಿಕ್ಕುತ್ತದೆ? ಬೆಳಕನ್ನು ಆರಿಸಿಕೊಳ್ಳುವ ಹಲವಾರು ಅವಕಾಶಗಳು ನಮಗೆ ಈಗಾಗಲೇ ಸಿಕ್ಕಿವೆ. ನಾವು ಕೇವಲ ಒಮ್ಮೆ ಮಾತ್ರ ಬೆಳಕನ್ನು ಆಯ್ಕೆಮಾಡಿಕೊಂಡು ಅನಂತರ ಮರೆತು ಸುಮ್ಮನಾಗುವಂತಿಲ್ಲ. ಪ್ರತಿದಿನ ನಮ್ಮ ಮನೆಗಳಲ್ಲಿ, ಕೆಲಸದಲ್ಲಿ, ಇತರರೊಂದಿಗಿನ ಒಡನಾಟಗಳಲ್ಲಿ ನಾವು ಅನೇಕ ಆಯ್ಕೆಗಳನ್ನು, ನಿರ್ಧಾರಗಳನ್ನು ಎದುರಿಸುತ್ತಿರುತ್ತೇವೆ. ಇಂಥ ಪ್ರತಿಯೊಂದು ಸಂದರ್ಭದಲ್ಲೂ ನಾವು ಬೆಳಕನ್ನು ಆಯ್ಕೆಮಾಡಿಕೊಳ್ಳಬೇಕು. ಬೆಳಕನ್ನು ಆಯ್ಕೆಮಾಡಿದಾಗ ನಾವು ಅಪ್ರಮಾಣಿಕರಾಗಲು ಸಾಧ್ಯವಿಲ್ಲ, ಸತ್ಯವಂತರಾಗಿರಲು ಮಾತ್ರ ಸಾಧ್ಯ.

ಬೆಳಕನ್ನು ಆರಿಸಿಕೊಂಡಾಗ ನಾವು ಇನ್ನೊಬ್ಬರ ಇಚ್ಛಾಸ್ವಾತಂತ್ರ್ಯಕ್ಕೆ ಅಡ್ಡಿಬರುವುದಿಲ್ಲ. ಇತರರ ಭಾವನೆಗಳಿಗೆ ಸ್ಪಂದಿಸುತ್ತೇವೆ ಮತ್ತು ನಮ್ಮ ನಂಬಿಕೆ–ತತ್ವಗಳನ್ನು ಅವರ ಮೇಲೆ ಹೇರುವುದಿಲ್ಲ. ಇನ್ನೊಬ್ಬರು ಕೇಳದೆಯೇ ಅವರಿಗೆ ಸಲಹೆ ಕೊಡಲು ಹೋಗುವುದಿಲ್ಲ. ಅವರ ಸಮಯ ಹಾಳು ಮಾಡುವುದಿಲ್ಲ. ಅವರೊಂದಿಗೆ ಒರಟಾಗಿ ವರ್ತಿಸುವುದಿಲ್ಲ. ಬೆಳಕನ್ನು ಆಯ್ಕೆಮಾಡಿಕೊಳ್ಳುವ ಪ್ರತಿಯೊಂದು ಸಂದರ್ಭದಲ್ಲೂ ನಾವು ಪ್ರೀತಿಯನ್ನು ವ್ಯಕ್ತಪಡಿಸುತ್ತ, ಅದರ ಸಹಗುಣಗಳಾದ ದಯೆ, ಕರುಣೆ ಮತ್ತು ನ್ಯಾಯವಂತಿಕೆಗಳನ್ನು ಪಾಲಿಸುತ್ತೇವೆ.

ಬೆಳಕನ್ನು ಆರಿಸಿಕೊಳ್ಳುವುದು ಅಷ್ಟೊಂದು ಕಠಿಣವೇಕೆ? ಬೆಳಕನ್ನು ಆರಿಸಿಕೊಳ್ಳಲು ನಮ್ಮಲ್ಲಿ ವೈರಾಗ್ಯವಿರಬೇಕು. ಕೇವಲ ಆನಂದದ ಅನುಭವವೊಂದೇ ನಮಗೆ ನಿಜವಾದ ವೈರಾಗ್ಯವನ್ನು ತಂದುಕೊಡುತ್ತದೆ. ಏಕೆಂದರೆ ಆನಂದವನ್ನು ಅನುಭವಿಸಿದಾಗ ನಾವು ನಿಜವಾದ ನೆಮ್ಮದಿಯನ್ನು ಪಡೆಯುತ್ತೇವೆ. ವೈರಾಗ್ಯವೆಂದರೆ ಎಲ್ಲದರಲ್ಲೂ ನಿರಾಸಕ್ತಿ ಯಿಂದಿರುವುದಲ್ಲ; ಅದು ಸಂಪೂರ್ಣವಾಗಿ ಸಂತೃಪ್ತರಾಗಿರುವಂಥ ಸ್ಥಿತಿ. ಆನಂದವನ್ನು ಅನುಭವಿಸಿದಾಗ ನಮ್ಮ ಬಳಿ ಏನಿರಲಿ, ಏನಿಲ್ಲದಿರಲಿ ನಮಗೆ ಈ ಸಂತೃಪ್ತಿಯ ಅನುಭವವಾಗುತ್ತದೆ. ಸಂತೃಪ್ತಿಯೆಂಬ ಈ ಒಂದು ಅಂಶ ಎಲ್ಲವನ್ನೂ ಬದಲಿಸುತ್ತದೆ.

–ಸೋಮಯಾಜಿ

### 28–12–08

ಎಲ್ಲ ಸಂಬಂಧಗಳೂ, ಎಲ್ಲ ವ್ಯಕ್ತಿಗಳೂ ಮತ್ತು ಎಲ್ಲ ಘಟನೆಗಳೂ ತಟಸ್ಥವೇ. ತಿಳಿದೋ, ತಿಳಿಯದೆಯೋ ನಾವು ಅವುಗಳೊಡನೆ ಇರುವ ನಮ್ಮ ಸಂಬಂಧಕ್ಕೆ ಅರ್ಥೈಸುತ್ತೇವೆ. ನಾವು ಅವುಗಳಿಗೆ ಅರ್ಥ ಕೊಟ್ಟಾಗ ಅವುಗಳನ್ನು ಒಪ್ಪಿಕೊಳ್ಳುತ್ತೇವೆ. ಹಾಗಾಗಿ ಅವೇ ನಮ್ಮ ನಂಬಿಕೆಗಳಾಗುತ್ತವೆ. ಸಂಪೂರ್ಣಾರ್ಥದಲ್ಲಿ ನೋಡಿದರೆ ನಮ್ಮ ಮನಸ್ಸಿನಲ್ಲಿ ತುಂಬಿರುವ ಭಾವನಾತ್ಮಕ ಕಲ್ಪನೆಗಳೆಲ್ಲ ನಿಜವಲ್ಲ. ಅದರಲ್ಲೂ ನಮ್ಮ ಬಗ್ಗೆ ನಮಗಿರುವ ಕಲ್ಪನೆಗಳು ಖಂಡಿತ ನಿಜವಲ್ಲ. ಇಲ್ಲಿರುವ ಸಮಸ್ಯೆ ಜ್ಞಾನದ್ದಲ್ಲ. ಸಮಸ್ಯೆ ಇರುವುದು ಜ್ಞಾನದಲ್ಲಿ ಆಗುವ ಕಲಬೆರಕೆಯಿಂದ.

ನಮ್ಮ ಬಗ್ಗೆ ನಮಗಿರುವ ನಂಬಿಕೆಯೇ ನಮ್ಮ ಪ್ರತಿಬಿಂಬ. ಅದೇ ರೀತಿ ಪ್ರತಿಯೊಬ್ಬರ ಬಗ್ಗೆ ನಮ್ಮದೇ ಆದ ಅಭಿಪ್ರಾಯವಿರುತ್ತದೆ. ನಾವು ನಿಜವಾಗಿಯೂ ಬೇರೆಯವರನ್ನು ಅರಿತಿದ್ದೇವೆಂದು ಕೊಂಡಿದ್ದೇವೆ. ಆದರೆ ನಮ್ಮ ಬಗ್ಗೆ ಹಾಗೂ ಬೇರೆಯವರ ಬಗ್ಗೆ ಇರುವ ನಂಬಿಕೆಯಷ್ಟೇ ನಮಗೆ ತಿಳಿದಿರುವುದು. ನಾವು ಬೇರೆಯವರೊಂದಿಗೆ ಏಕತೆಯ ಅನುಭವವನ್ನು ಹೊಂದಲು ವ್ಯಕ್ತಿಗಳೊಂದಿಗೆ ಸಂಬಂಧಿಸಬೇಕೇ ಹೊರತು, ಅವರ ಅಭಿಪ್ರಾಯಗಳು ಅಥವಾ, ಭಾವನೆಗಳ ಜೊತೆ ಅಲ್ಲ.

ಬೇರೆಯವರು ತಮ್ಮಂತೆ ವರ್ತಿಸಬೇಕೆಂದು ಬಯಸುವವರು ಅವರುಗಳು ಇರುವಂತೆಯೇ ಒಪ್ಪಿಕೊಳ್ಳಬೇಕು. ಹಾಗೆ ನಾವು ಮಾಡಿದಾಗ ಆಶ್ಚರ್ಯಕರವಾಗಿ ಅವರು ನಮಗೆ ಬೇಕಾದ ರೀತಿಯಲ್ಲಿ ವರ್ತಿಸುತ್ತಾರೆ. ಇದು ಒಂದು ವಿಪರ್ಯಾಸ. ಯಾವುದನ್ನು ಬಲವಂತವಾಗಿ ತಡೆಹಿಡಿಯುತ್ತೇವೋ, ಅದು ಪುಟಿದೇಳುತ್ತದೆ; ಉದಾಸೀನವಮಾಡಿದರೆ ಹಿಂಬಾಲಿಸುತ್ತದೆ. ಬೇರೊಬ್ಬರ ತಪ್ಪನ್ನು ತಿದ್ದುವ ಅವಶ್ಯಕತೆ ಇಲ್ಲ. ಇದನ್ನು ಮಾಡುವ ಮೊದಲು ನಾವು ಅದಕ್ಕೆ ಯೋಗ್ಯರಾಗಿರಬೇಕು. ನಾವು ಎಲ್ಲಿಯವರೆಗೆ ಬೇರೊಬ್ಬರನ್ನು ಅವರಿರುವಂತೆ ಒಪ್ಪಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಅವರನ್ನು ತಿದ್ದಲು ನಾವು ಯೋಗ್ಯರಲ್ಲ.

ಒಬ್ಬರನ್ನು ಒಪ್ಪಿಕೊಳ್ಳುವುದೆಂದರೆ ಅವರ ಬಗ್ಗೆ ನಮಗಿರುವ ಅಭಿಪ್ರಾಯವನ್ನು ಬದಲಾಯಿಸಿಕೊಳ್ಳುವುದೇ ಹೊರತು ನಮ್ಮ ಹಳೆಯ ನಂಬಿಕೆಗಳನ್ನು ಬಿಡದೆ ಸುಮ್ಮನೆ ಅವರೊಡನಿರುವುದಲ್ಲ. ನಾವು ನಮ್ಮ ನಡೆನುಡಿಗಳಲ್ಲಿ ಅದನ್ನು ಅನುಷ್ಠಾನಕ್ಕೆ ತರಬೇಕು. ಇದು ನಮ್ಮ ಋಜುತ್ವವನ್ನು ಬಲಪಡಿಸುತ್ತದೆ. ನಾವು ಋಜುತ್ವವನ್ನು ಬಿಡದೆ ದೃಢವಾಗಿಸಿಕೊಂಡಾಗ, ಅದು ನಮ್ಮಲ್ಲಿ ಬದಲಾವಣೆಯನ್ನು ತರುತ್ತದೆ. –ನರೇಂದ್ರಬಾಬು

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 1000/–), ಕನ್ನಡದಲ್ಲಿ ಮತ್ತು ಮರಾಠಿಯಲ್ಲಿ (ವರ್ಷಕ್ಕೆ ರೂ. 700/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿಕೊಡಲಾಗುವುದು.
- ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ಎಲ್ಲಾ ಪ್ರಶ್ನೆಗಳಿಗೆ ಮತ್ತು ಸಂದೇಹಗಳಿಗೆ ಗುರೂಜಿಯವರೇ ಉತ್ತರಿಸುತ್ತಾರೆ.
- ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಫೌಂಡೇಶನ್ (ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಪತ್ರಗಳು

ಸಂ: ಶ್ಯಾಮಲಾದೇವಿ; ಅನು: ಗುರುಪ್ರಸಾದ್

ನನ್ನಲ್ಲಿ ಮಹತ್ವದ ಅನುಭವಗಳೇನೂ ಆಗಿಲ್ಲ. ಆದರೆ ನಾನು ಖಚಿತವಾಗಿ ನನ್ನ ಧ್ಯಾನದ ಗುಣಮಟ್ಟ ಹೆಚ್ಚಿದೆಯೆಂದು ಹೇಳಬಲ್ಲೆ. ಹೊರಗಿನ ಅಡಚಣೆಗಳು ಹಾಗೂ ಬೇಡದ ಯೋಚನೆಗಳು ಇದ್ದಾಗಲೂ ಮಾತುಗಳಿಂದ ವ್ಯಕ್ತಪಡಿಸಲಾಗದ ಒಂದು ರೀತಿಯ ನಿಶ್ಚಲತೆ ಧ್ಯಾನದಲ್ಲಿ ಅನುಭವವಾಗುತ್ತಿದೆ.

ಇದಕ್ಕೆ ಮುಂಚೆ ಕೆಲಸದ ಒತ್ತಡಗಳು ಹಾಗೂ ತೀವ್ರ ದಣಿವಿನಿಂದಾಗಿ ನಾನು ಧ್ಯಾನ ಮಾಡುವುದೇ ಅಪರೂಪವಾಗಿತ್ತು. ಎರಡು ತಿಂಗಳ ಹಿಂದೆ ಒಂದು ದಿನ ಮನೆಗೆ ಹೋಗುವಾಗ ಬಸ್ಸಿನಲ್ಲಿ ಶಂಬಲ ನಿಯಮ — 1ನ್ನು ಅಭ್ಯಾಸ ಮಾಡತೊಡಗಿದೆ. ಮನೆ ಸೇರುವಷ್ಟರಲ್ಲಿ ನನ್ನ ಆಯಾಸವೆಲ್ಲಾ ಮಾಯವಾಗಿ ನಾನು ಸುಲಭವಾಗಿ ಧ್ಯಾನಮಾಡಲು ಸಾಧ್ಯವಾಯಿತು. ಇದು ನಿಜಕ್ಕೂ ಆಶ್ಚರ್ಯಕರವಾಗಿತ್ತು. —ಶಾಂತಕುಮಾರಿ

ಕೇವಲ ಕೆಲವೇ ತಿಂಗಳ ಧ್ಯಾನಾಭ್ಯಾಸವು ನನ್ನಲ್ಲಿ ತುಂಬುತನವನ್ನು ತಂದಿದೆ. ಈಗ ಏಕಾಂತ ಹೆಚ್ಚು ಪ್ರಿಯವಾಗುತ್ತಿದೆ. ಹರಟೆಯಲ್ಲಿ ಅಥವಾ ಇತರರಲ್ಲಿ ನಂಬಿಕೆ ಮೂಡಿಸಲು ಪ್ರಯತ್ನಿಸುವ ಮಾತುಗಳಿಗೆ ಬದಲಾಗಿ, ದೇವರು ಮತ್ತು ನನ್ನ ಬಗ್ಗೆ ಆಲೋಚಿಸುವುದರಲ್ಲಿ ಹೆಚ್ಚು ಸಮಯ ಕಳೆಯುವುದು ನನಗೆ ಪ್ರಿಯವಾಗಿದೆ.

—ಅರ್ಚನ ಪಿಳ್ಳೈ

'New Age Realities' ಪುಸ್ತಕವು, ಹೊಸಯುಗದ ಬಗ್ಗೆ ಇರುವ ವಿವಿಧ ಅಭಿಪ್ರಾಯಗಳನ್ನು ಚರ್ಚಿಸಿ, ನಂತರ ನೀವು ಋಷಿಗಳ ಮಟ್ಟದಿಂದ ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಹೊಂದಿದ್ದು, ಎಲ್ಲ ಜನತೆಗೆ ಒಂದು ದಿಕ್ಸೂಚಿಯಾಗಿದೆ. ಸಾಧನೆಯ ಅಂತಿಮಗುರಿ ಬೆಳಕನ್ನು ಅನುಭವಿಸುವುದು ಮತ್ತು ಸಕಾರಾತ್ಮಕವಾಗುವುದು ಎಂದು ಓದಿ ನನಗೆ ನಿರಾಳವೆನಿಸಿತು ಮತ್ತು ಸಾಧನೆ ಮುಂದುವರಿಸಲು ಉತ್ತೇಜನ ಸಿಕ್ಕಂತಾಯಿತು.

ಈ ಮಾರ್ಗವನ್ನು ನನ್ನ ಸಾಧನೆಗಾಗಿ ಮತ್ತು ನಿಮ್ಮನ್ನು ನನ್ನ ಗುರುವಾಗಿ ಆರಿಸಿಕೊಳ್ಳಲು ಮುಖ್ಯ ಕಾರಣ, "ಎಲ್ಲ ತತ್ವಗಳು, ಪರಿಕಲ್ಪನೆಗಳು, ಬೋಧನೆಗಳು, ಮೂರ್ತಿಪೂಜೆ ಇತ್ಯಾದಿಗಳೆಲ್ಲಕ್ಕಿಂತ ಬೆಳಕಿಗೆ ಹೆಚ್ಚು ಮಹತ್ವ ಕೊಟ್ಟಿರುವುದು." ಒಳ್ಳೆಯದೆಂಬುದು ಸೈದ್ಧಾಂತಿಕವಾಗಿ ಏಕಪಕ್ಷೀಯ ಮತ್ತು ಅದಕ್ಕೆ ಒಂದು ಮಿತಿಯಿದೆ. ಆದರೆ ಬೆಳಕು ಅನಂತ.

—ಲಿನ್

## ವಿವೇಕದ ನುಡಿಗಳು

ಸಂಗ್ರಹ ಮತ್ತು ಅನುವಾದ: ನರೇಂದ್ರ ಬಾಬು

ಧ್ಯಾನ ಧಾರ್ಮಿಕವಲ್ಲ, ಅದು ಆಧ್ಯಾತ್ಮಿಕ ಕ್ರಿಯೆ.
—ಮಹರ್ಷಿ ಅಮರ

ಪ್ರೀತಿ ಮತ್ತು ಸ್ವಾತಂತ್ರ್ಯ, ಇವು ಆಧ್ಯಾತ್ಮಿಕತೆಯ ಮೂಲ ಸೂತ್ರಗಳು. —ಗುರೂಜಿ

ನಮ್ಮ ಇಷ್ಟದಂತೆ ನಾವು ಬದುಕುವುದು ಸ್ವಾರ್ಥವಲ್ಲ; ಬೇರೆಯವರು ನಮ್ಮ ಇಷ್ಟದಂತೆ ಬದುಕಲು ಬಯಸುವುದು ಸ್ವಾರ್ಥ.
—ಆಸ್ಕರ್ ವೈಲ್ಡ್

ಬದುಕಲು ಪ್ರೀತಿಸಬೇಕು, ಪ್ರೀತಿಸಲು ಕಲಿಯಬೇಕು, ಕಲಿಯಲು ಬದುಕಬೇಕು.
—ಜೆಫ್ ಲುಡ್‌ವಿಗ್

ಸಂತೋಷದೆಡೆಗೆ ಒಂದು ಬಾಗಿಲು ಮುಚ್ಚಿದರೆ ಮತ್ತೊಂದು ತೆರೆದುಕೊಳ್ಳುತ್ತದೆ; ಆದರೆ ನಾವು ಮುಚ್ಚಿರುವ ಬಾಗಿಲನ್ನೇ ಎದುರು ನೋಡುತ್ತಾ ತೆರೆದಿರುವ ಬಾಗಿಲನ್ನು ಗಮನಿಸುವುದಿಲ್ಲ.
—ಹೆಲೆನ್ ಕೆಲ್ಲರ್

ನಾವು ಇಷ್ಟಪಟ್ಟದ್ದು ನಮಗೆ ಸಿಕ್ಕದಿದ್ದಾಗ, ನಮಗೆ ಸಿಕ್ಕುವುದು ಅನುಭವ. —ಅಜ್ಞಾತ ಲೇಖಕ

ದೇವರನ್ನು ಕಾಣಲು ಉತ್ತಮ ಮಾರ್ಗವೆಂದರೆ ಎಲ್ಲವನ್ನೂ ಪ್ರೀತಿಸುವುದು. —ವಿನ್ಸೆಂಟ್ ವ್ಯಾಂಗಾಗ್

ಊಹೆ ಸಂಬಂಧಗಳನ್ನು ಕೊರೆಯುವ ಗೆದ್ದಲು.
—ಹೆನ್ರಿ ವಿಂಕ್ಲರ್

ನಾನು ಇಷ್ಟಪಡದ ವ್ಯಕ್ತಿಯನ್ನು ಎಂದೂ ಭೇಟಿ ಮಾಡಿಲ್ಲ. —ವಿಲ್ ರೋಜರ್ಸ್

ಪ್ರೀತಿಸಲ್ಪಡುವುದಕ್ಕಿಂತ ಪ್ರೀತಿಸುವುದು ಮುಖ್ಯ
—ಸಾಮರ್‌ಸೆಟ್ ಮಾಮ್

ಪ್ರಪಂಚವನ್ನು ಇದ್ದಂತೆ ಒಪ್ಪಿಕೊಳ್ಳಬೇಕು, ಇರಬೇಕಾದಂತೆ ಅಲ್ಲ. —ಶಿರ್ಲೆ ಲಾರ್ಡ್

ಮಹತ್ವಾಕಾಂಕ್ಷೆಯ ಅಂತ್ಯವೇ ಸಂತೋಷದ ಉದಯ. —ಹಂಗೇರಿಯನ್ ಗಾದೆ

ಜನರು ಸುಲಭವಾಗಿ ಗೋಳಿಡುತ್ತಾರೆಯೇ ವಿನಃ ಬದಲಾಗಲು ಪ್ರಯತ್ನಿಸುವುದಿಲ್ಲ.
—ಜೇಮ್ಸ್ ಬಾಲ್ಡ್‌ವಿನ್

ಕ್ಷಮೆ ಎಂದೋ ಒಮ್ಮೆ ಅಗುವ ಕ್ರಿಯೆಯಲ್ಲ, ಅದು ಎಂದಿಗೂ ಇರುವ ಮನೋಭಾವ.
—ಮಾರ್ಟಿನ್‌ಲೂಥರ್‌ಕಿಂಗ್ ಜೂ.

ನಮ್ಮನ್ನು ನಾವು ಪುನರುಜ್ಜೀವನಗೊಳಿಸುವ ಶಕ್ತಿಯಿರುವವರೆಗೂ ನಾವು ಬದುಕಿರುತ್ತೇವೆ.
—ಹೆನ್ರಿಫ್ರೆಡ್ರಿಕ್ ಅಮೀಲ್

ಕ್ಷಮಿಸುವುದರಲ್ಲಿ ನಮ್ಮ ನಿಜವಾದ ಶಕ್ತಿ ಅಡಗಿದೆ. —ಮಹಾತ್ಮಾ ಗಾಂಧಿ

ಯಾವುದೇ ಸಮಸ್ಯೆಯನ್ನು ಬಗೆಹರಿಸಬಲ್ಲೆನೆಂಬ ಆತ್ಮಸ್ಥೈರ್ಯ ಉಳ್ಳವನನ್ನು ನೋಡಿಯೇ ಅವಕಾಶಗಳು ಬರುತ್ತವೆ. —ಸುಭಾಷಿತ

## ಪ್ರಶ್ನೆಗಳು ಮತ್ತು ಉತ್ತರಗಳು

(ಸಂಗ್ರಹ: ಶೋಭಾ ಕೆ. ರಾವ್, ಅನು: ಉಷಾ ವಾಸನ್)

**ಪ್ರ: ನಮ್ಮ ನಿಜ ವ್ಯಕ್ತಿತ್ವ ಯಾವುದು?**

ಉ: ನಮ್ಮ ನಿಜ ವ್ಯಕ್ತಿತ್ವ ಬೆಳಕಿನ ಒಂದು ಕಣ, ನಮ್ಮ ಆತ್ಮ. ಈ ನಿಜ ವ್ಯಕ್ತಿತ್ವ ಶುದ್ಧ, ಕಳಂಕರಹಿತ ಮತ್ತು ಯಾವಾಗಲೂ ಬೆಳಕಿನೊಂದಿಗೆ, ದೇವರೊಂದಿಗೆ ಹೊಂದಿಕೊಂಡಿರುತ್ತದೆ.

**ಪ್ರ: ಜ್ಯೋತಿ ಕಾರ್ಯಕರ್ತನೆಂದರೆ ಯಾರು?**

ಉ: ಜ್ಯೋತಿ ಕಾರ್ಯಕರ್ತನೆಂದರೆ ಬೆಳಕನ್ನು ಅನುಭವಿಸಿದವನು, ಯಾವಾಗಲೂ ಬೆಳಕಿನೊಂದಿಗೆ ಬದುಕುವವನು ಮತ್ತು ಎಲ್ಲಾ ಸಮಯದಲ್ಲೂ ಬೆಳಕಿನ ಅರಿವಿರುವವನು ಮತ್ತು ಅದಕ್ಕೆ ಶರಣಾದವನು. ಜ್ಯೋತಿ ಕಾರ್ಯಕರ್ತ, ಋಷಿಗಳ ಅಧೀನದಲ್ಲಿ ಕೆಲಸ ಮಾಡುತ್ತಾನೆ.

**ಪ್ರ: ನಮಗೆ ಬರುವ ಸೂಚನೆಗಳು ಬೆಳಕಿನಿಂದ ಅಥವಾ ಋಷಿಗಳಿಂದ ಎಂದು ಹೇಗೆ ಖಚಿತ ಮಾಡಿಕೊಳ್ಳುವುದು?**

ಉ: ನೀವು ನಿಜವಾಗಿ ಋಷಿಗಳಿಗೆ ಅಥವಾ ಬೆಳಕಿಗೆ ಗಮನವಿಟ್ಟು ಆಲಿಸಿದರೆ ನಿಮಗೇ ತಿಳಿಯುತ್ತದೆ, ಯಾರೂ ಹೇಳಬೇಕಾಗಿಲ್ಲ.

**ಪ್ರ: ಧ್ಯಾನಿಗಳು ಋಷಿಗಳ ರಕ್ಷಣೆಯಲ್ಲಿರುವಾಗ ಅಪಘಾತಗಳು ಏಕೆ ಆಗುತ್ತವೆ?**

ಉ: ರಕ್ಷಣೆಯು ಒಂದು ಕವಚವಿದ್ದಂತೆ. ಅದು ನಮಗೆ ಕೊಡಲ್ಪಟ್ಟಿದೆ. ಅದನ್ನು ನಾವು ಸುಸ್ಥಿತಿಯಲ್ಲಿಟ್ಟು ಹಾನಿಯಾಗದಂತೆ ನೋಡಿಕೊಳ್ಳಬೇಕು. ನಿಯತ ಧ್ಯಾನದಿಂದ ಅದನ್ನು ಬಲಗೊಳಿಸಬೇಕು ಮತ್ತು ನಮ್ಮ ನಕಾರಾತ್ಮಕತೆಯನ್ನು ದೂರವಿಡಬೇಕು.

**ಪ್ರ: ನನ್ನ ಹಿಂದಿನ ಜನ್ಮದ ಬಗ್ಗೆ ತಿಳಿದುಕೊಳ್ಳಲು ಏನಾದರೂ ಮಾರ್ಗವಿದೆಯೇ?**

ಉ: ಹೌದು. ಹಲವು ಮಾರ್ಗಗಳು, ವಿಶೇಷ ತಂತ್ರಗಳು ಮತ್ತು ಸಾಧನೆಗಳಿವೆ. ಆದರೆ ನಮ್ಮ ಗತಕಾಲಕ್ಕೆ ಹೋಗಲು ಮತ್ತು ನಮ್ಮ ಬಗ್ಗೆ ತಿಳಿದುಕೊಳ್ಳಲು ನಾವು ಋಷಿಗಳ ಅನುಮತಿ ಪಡೆಯಬೇಕು.

**ಪ್ರ: ನಮ್ಮ ಗತ ಬದುಕಿನ ನಿವರ್ತನದಿಂದ ನಾವು ನಿಜವಾಗಿಯೂ ಕಲಿಯುತ್ತೇವೆಯೇ?**

ಉ: ಇಲ್ಲ.

**ಪ್ರ: ನಮ್ಮ ಆಧ್ಯಾತ್ಮಿಕ ಬೆಳವಣಿಗೆಗೆ ನಮ್ಮ ಗತವನ್ನು ತಿಳಿಯುವ ಅವಶ್ಯವಿದೆಯೇ?**

ಉ: ಆಧ್ಯಾತ್ಮಿಕ ಬೆಳವಣಿಗೆಗೆ ನಮ್ಮ ಗತಕಾಲದ ಜ್ಞಾನದ ಅವಶ್ಯವಿಲ್ಲ .

**ಪ್ರ: ಯಾವಾಗ ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಗೆ ಅಂಜುತ್ತಾನೆ?**

ಉ: ಸಾಮಾನ್ಯವಾಗಿ, ಒಬ್ಬ ವ್ಯಕ್ತಿಯು ಇನ್ನೊಬ್ಬರಿಗೆ ಅಂಜುವುದು ಆ ವ್ಯಕ್ತಿಗೆ ತೊಂದರೆ ಮಾಡಿದ್ದಾಗ ಮಾತ್ರ.

**ಪ್ರ: ಅಸತ್ಯ ಮತ್ತು ಭಯ ಸಂಬಂಧಿಗಳೇ?**

ಉ: ಖಂಡಿತವಾಗಿ ಅವು ಸಂಬಂಧಿಗಳು.

**ಪ್ರ: ನಮ್ಮೊಳಗಿನ ದೇವರ ಧ್ವನಿಯನ್ನು ಗುರುತಿಸುವುದು ಹೇಗೆ?**

ಉ: ನಾವು ದೇವರ ಸಂಪರ್ಕವನ್ನು ನಮ್ಮ ನೇರ ಅರಿವಿನಿಂದ ಗ್ರಹಿಸುತ್ತೇವೆ. ನೀವು ಅದನ್ನು ಆಲಿಸಿದರೆ ಅದನ್ನು ತಿಳಿಯುತ್ತೀರಿ. ನೀವು ಕೇಳಲು ಪ್ರಯತ್ನಪಟ್ಟರೆ ಯಾವಾಗಲೂ ಆಲಿಸುತ್ತೀರಿ.

**ಪ್ರ: ಶರಣಾಗತಿಯೆಂದರೆ ಯಾವುದನ್ನಾದರೂ ಕುರುಡಾಗಿ ಸ್ವೀಕರಿಸುವುದೇ?**

ಉ: ಅಲ್ಲ. ಅದು ಏನನ್ನಾದರೂ ತೆರೆದ ಕಣ್ಣಿನಿಂದ ಸ್ವೀಕರಿಸುವುದು, ಕುರುಡಾಗಿ ಅಲ್ಲ. ಶರಣಾಗತಿ ಪ್ರೀತಿ ಮತ್ತು ವಿಶ್ವಾಸಗಳ ಒಂದು ಜಾಗೃತ ಕ್ರಿಯೆ. ನಾವು ದೇವರಿಗೆ ಶರಣಾಗುತ್ತೇವೆ.

**ಪ್ರ: ಮಂತ್ರವನ್ನು ಜಪಿಸುವುದು ಆತ್ಮವೇ ಅಥವಾ ಮನಸ್ಸೇ?**

ಉ: ಮನಸ್ಸು ಮಂತ್ರವನ್ನು ಜಪಿಸುತ್ತದೆ. ಆದರೆ ಆತ್ಮ ಮನಸ್ಸಿಗೆ ಮಂತ್ರವನ್ನು ಜಪಿಸಲು ಆದೇಶಿಸುತ್ತದೆ.

**ಪ್ರ: ನಾವು ಧ್ಯಾನ ಮಾಡುವಾಗ 'ಬೆಳಕನ್ನು' ಕಲ್ಪಿಸಲು ಹೇಳುವಾಗ, ಆತ್ಮ ಕಲ್ಪನೆಯನ್ನು ಒದಗಿಸುತ್ತದೆಯೇ?**

ಉ: ಇದು ಸತ್ಯ. ಆತ್ಮ ಕಲ್ಪನೆಯನ್ನು ಒದಗಿಸುತ್ತದೆ.


**ಪ್ರ: ಆಲೋಚನೆಯನ್ನು ಅನುಭವಿಸುವುದು ಹೇಗೆ?**

ಉ: ನಾವು ಆಲೋಚನೆಯನ್ನು ಅನುಭವಿಸಲು ಸಾಧ್ಯವಿಲ್ಲ, ಆದರೆ ನಾವು ಆಲೋಚನೆಯ ಪರಿಣಾಮವನ್ನು ಅನುಭವಿಸಬಹುದು.

## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| iGuruji | 150/- |
| Living in the Light of My Guru | 220/- |
| A Package from the Rishis (containing 5 Booklets) | 250/- |
| - How to Meditate | |
| - Dhyana Yoga | |
| - Descent of Soul | |
| - Practising Shambala Principles | |
| - Astral Ventures of A Modern Rishi | |
| The Masters Answer | 120/- |
| Channelled Knowledge from the Rishis | 250/- |
| Guruji Speaks Part - I | 200/- |
| Guruji Speaks Part - II | 200/- |
| The Book of Reflections - Vol 1 | 200/- |
| The Book of Reflections - Vol 2 | 200/- |
| Patanjali Yoga Sutra | (out of print) |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಅನಿಸಿಕೆಗಳು | 120/- |
| ಋಷಿಗಳಿಂದ ಬಂದ ಕೊಡುಗೆ (ಐದು ಪುಸ್ತಕಗಳು) | 250/- |
| – ಧ್ಯಾನ ಮಾಡುವುದು ಹೇಗೆ | |
| – ಧ್ಯಾನ ಯೋಗ | |
| – ಆತ್ಮದ ಅವರೋಹಣ | |
| – ಶಂಬಲ ನಿಯಮಗಳ ಅಭ್ಯಾಸ | |
| – ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಅನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| ध्यान कैसे करे (Hindi) | 50/- |
| प्रकाशमय जीवन (Hindi) | 10/- |
| தியானம் செய்வது எப்படி | 50/- |
| ஒளியின் வாயில்கள் | 200/- |
| ஒளீயீல் வாழ்க்கை | 10/- |
| व्ऋण टश्व्रि–ण्ण ग्रष्ट | 50/- |
| "थ्व्र्ण्टत्र–ण्ण | 10/- |

RNI. No. KARKAN/2003/13739 Registered Postal Regn. No. CPMG/KA/CNA-48/2009-11
Date of posting Newsletter-25th of Every Month. No. of Pages-8



## ಗುರೂಜಿ ಕೃಷ್ಣಾನಂದ (1939)

### ಮಾನಸ ಫೌಂಡೇಷನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸತ್ಸಂಗ

ಪ್ರತಿ ಶುಕ್ರವಾರ ಬೆಳಿಗ್ಗೆ 11ರಿಂದ 12ರವರೆಗೆ ತಪೋನಗರದಲ್ಲಿ ಗುರೂಜಿಯವರೊಂದಿಗೆ ಸಮೂಹ ಧ್ಯಾನವಿರುತ್ತದೆ. ಯಾರಾದರೂ ಇದರಲ್ಲಿ ಭಾಗವಹಿಸಬಹುದು.

### ಲೈಟ್ ಚಾನೆಲಿಂಗ್

ಪ್ರತಿ ಶುಕ್ರವಾರ ಮಧ್ಯಾಹ್ನ 12ರಿಂದ 1ರವರೆಗೆ ತಪೋನಗರದಲ್ಲಿ ಧ್ಯಾನಿಗಳು ಲೈಟ್ ಚಾನೆಲಿಂಗ್‌ಅನ್ನು ಮಾಡುತ್ತಾರೆ.

### ಹೀಲಿಂಗ್ ತರಗತಿಗಳು

ಪ್ರತಿ 5ನೇ ಭಾನುವಾರ, ಮಧ್ಯಾಹ್ನ 2ರಿಂದ 2.30ರವರೆಗೆ ತಪೋನಗರದಲ್ಲಿ ಹೀಲಿಂಗ್ ತರಗತಿ ನಡೆಯುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('ಮಾನಸ ಫೌಂಡೇಷನ್'ನ ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಆಧ್ಯಾತ್ಮಿಕ ಅನುಭವಗಳು

(ಸಂಗ್ರಹ: ಸುಧಾಕರ್, ಅನು: ಸ್ವರ್ಣಲತ)

ನನಗೆ ಶಂಬಲ ನಿಯಮ 1 ನ್ನು ಅಭ್ಯಸಿಸಲು ಮನೋಮಯಕೋಶದಲ್ಲಿ ಬೆಳಕನ್ನು ಕಲ್ಪಿಸಿಕೊಳ್ಳಲು ಆಗುತ್ತಿರಲಿಲ್ಲ. ಆಗ ನನ್ನ ಸಂಪರ್ಕದಲ್ಲಿದ್ದ ಋಷಿಗಳು ಕೆಲವು ಕ್ಷಣಗಳು ಬೆಳಕಿನ ಬಗ್ಗೆ ಯೋಚಿಸಲು ತಿಳಿಸಿದರು. ನಂತರ ನನ್ನ ಇಡೀ ದೇಹದಲ್ಲಿ ಬೆಳಕಿನ ಅನುಭವವಾಯಿತು. ಅವರು, ಆನಂದ ಸದಾ ಎಲ್ಲೆಡೆ ಇರುತ್ತದೆ ಮತ್ತು ನಾನು ನನ್ನೊಳಗಿರುವ ಆನಂದವನ್ನು ಅದರೊಂದಿಗೆ ಬೆಸೆಯಬೇಕು, ಹಾಗೂ ಒಳಗಿನ ಆನಂದವನ್ನು ಅನುಭವಿಸಿಲು ಸಾಧ್ಯವಾದರೆ ಸುತ್ತಲಿರುವ ಆನಂದದೊಂದಿಗೆ ಸಂಪರ್ಕಹೊಂದುವುದು ಮತ್ತು ಹರಡುವುದು ಸುಲಭವಾಗುವುದೆಂದು ತಿಳಿಸಿದರು.

—ಅರ್ಚನ ವಿಶ್ವನಾಥ್

ಇತ್ತೀಚೆಗೆ ನನ್ನ ಕನಸಿನಲ್ಲಿ ಕೆಲವರು ಬಿರುಗಾಳಿಯಂತೆ ಮನೆಯೊಳಗೆ ನುಗ್ಗಿ ನನ್ನ ಮೇಲೆ ಆಕ್ರಮಣ ಮಾಡಲು ಬಂದರು. ಎಲ್ಲರೂ ಕಪ್ಪು ಉಡುಪು ಧರಿಸಿದ್ದರು. ನನಗೆ ಬಹಳ ಭಯವಾಗಿ 'ಗುರೂಜಿ' ಎಂದು ಗಟ್ಟಿಯಾಗಿ ಕೂಗಿಕೊಂಡೆ. ತಕ್ಷಣವೇ ಗುರೂಜಿಯವರು ಬೃಹದಾಕಾರವಾಗಿ ಬಂದು ನನ್ನ ಕೊಠಡಿಯನ್ನು ಬೆಳಕಿನಿಂದ ತುಂಬಿಸಿದರು. ನಂತರ ಈ ದಿವ್ಯ ಬೆಳಕು ಆಕ್ರಮಣಕಾರಿಗಳ ಕಡೆಗೆ ನುಗ್ಗಿತು. ಆ ಬೆಳಕಿನ ಪ್ರಖರತೆಯನ್ನು ತಾಳಲಾರದೆ ಅವರೆಲ್ಲ ಪಲಾಯನ ಮಾಡಿದರು. ನನಗೆ ಸಂಪೂರ್ಣವಾಗಿ ಎಚ್ಚರವಾದಾಗ ನಾನು ಆ ಬೆಳಕಿನಿಂದ ಆವೃತವಾಗಿದ್ದೆ. ಮನಸ್ಸಿನಲ್ಲೆ ಋಷಿಗಳಿಗೆ, ಗುರೂಜಿಯರಿಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸಿದೆ.

—ಅಂಜಲಿ ಪಾಟೀಲ್

ನಾನು ಕೆಲವು ಕೆಲಸಗಳನ್ನು ಮಾಡಲೇಬೇಕಿತ್ತು ಆದರೆ ಸಮಯ ಬಹಳ ಕಡಿಮೆ ಇತ್ತು. ಆಗ ನನ್ನಲ್ಲಿನ ಒಳ ಅರಿವು ಸಹಜ ರೀತಿಯಲ್ಲಿ ಕೆಲಸಮಾಡಲು ಹೇಳಿತು. ಅದರಂತೆ ನಾನು ಕೆಲಸಗಳನ್ನು ಯಾವುದೇ ಆತುರವಿಲ್ಲದೆ, ಗಮನವಿಟ್ಟು ಒಂದಾದ ಮೇಲೆ ಒಂದರಂತೆ ಎಲ್ಲ ಕೆಲಸಗಳನ್ನು ಮುಗಿಸಿದೆ. ಇನ್ನೂ ಸಮಯ ಉಳಿದಿರುವುದನ್ನು ನಾನು ಗಮನಿಸಿದೆ. ಯಾವುದೇ ಕೆಲಸವಾದರೂ ಮಾಡಬೇಕಾದ ರೀತಿಯಲ್ಲಿ ಮಾಡಿದರೆ ಸಮಯವೂ ಸಹ ಸಹಕರಿಸುತ್ತದೆ ಎಂಬುದು ನನಗೆ ಈ ಘಟನೆಯಿಂದ ಅರ್ಥವಾಯಿತು.

ಗೀತೆಯಲ್ಲಿ ಶ್ರೀಕೃಷ್ಣ 'ನಿನ್ನ ಕರ್ತವ್ಯವನ್ನು ಮಾಡು ಅದರ ಫಲದ ಬಗ್ಗೆ ಯೋಚಿಸಬೇಡ' ಎಂದು ತಿಳಿಸಿದ್ದಾನೆ. ಇದು ಹೇಗೆ ಪ್ರಸಂಗೋಚಿತವಾಗಿದೆ? ಇದರ ನಿಜಾರ್ಥ ಏನು? ಎಂದು ಯೋಚಿಸುತ್ತಿದ್ದೆ. ಸರಿಯಾದ ರೀತಿಯಲ್ಲಿ ಮಾಡಿದರೆ ಅದರ ಫಲಿತಾಂಶ ಸಹಜವಾಗಿಯೇ ಒಳ್ಳೆಯದಾಗಿರುತ್ತದೆ. ಪರಿಪೂರ್ಣತೆ ತತ್‌ಕ್ಷಣದಲ್ಲಿ, ವರ್ತಮಾನದಲ್ಲಿ ಆಗುವಂಥದು. ಈ ರೀತಿ ಕೆಲಸ ಮಾಡಿದರೆ ನಾವು ಯಾವುದೇ ಕರ್ಮಕ್ಕೂ ಭಾಗಿಯಾಗುವುದಿಲ್ಲ ಎಂಬುದು ಕೃಷ್ಣನ ಸಂದೇಶವೆಂದು ನನಗೆ ಅರ್ಥವಾಯಿತು. ನಂತರ, ಭಾವನೆಗಳು ಸಹ ಮುಖ್ಯವೆಂದು ಹೇಳಲಾಯಿತು. ನಾವು ಪ್ರಾರ್ಥನೆ ಮಾಡುವಾಗ, ಏನನ್ನಾದರೂ ಹೇಳುವಾಗ ಅಥವಾ ಮಾಡುವಾಗ, ಭಾವಪೂರ್ಣವಾಗಿಯೇ ಮಾಡಬೇಕು. ಆಗ ಮಾತ್ರ ವಿಶ್ವದಲ್ಲಿರುವ ಪೂರ್ಣತೆಯನ್ನು ಅನುಭವಿಸಬಹುದು.

ಶ್ರೀಕೃಷ್ಣಜನ್ಮಾಷ್ಟಮಿಯ ವಿಶೇಷ ಧ್ಯಾನದಲ್ಲಿ ಶ್ರೀಕೃಷ್ಣ ಕಾಣಿಸಿಕೊಂಡು, ನಾನು ನನ್ನತನದಿಂದಾಚೆ ಹೋಗಬೇಕೆಂದು ಮತ್ತು ನನ್ನ ಭೌತಿಕ ಶರೀರಕ್ಕಷ್ಟೇ ಸೀಮಿತಗೊಳಿಸದೆ, ಅದನ್ನು ಮೀರಿ ಏಕತೆಯನ್ನು, ಪೂರ್ಣತೆಯನ್ನು ಸಂವೇದಿಸಬೇಕು; ಎಲ್ಲದರಲ್ಲಿ ಪರಿಪೂರ್ಣತೆಯನ್ನು ಕಂಡಾಗ ನಾನು ಆಧ್ಯಾತ್ಮಿಕವಾಗಿ ಬೆಳೆಯುತ್ತೇನೆ, ಎಂದು ಹೇಳಿದನು.

ಕೆಲವು ಸಾರಿ ಗುರೂಜಿಯವರೊಡನೆ ಮಾನಸಿಕವಾಗಿ ತಡೆಇಲ್ಲದೆ ಮಾತನಾಡುತ್ತೇನೆ. ಗುರೂಜಿಯವರು ದಿವ್ಯ ಮುಗುಳ್ನಗೆಯೊಂದಿಗೆ, ಅವರು ನನ್ನೊಡನೆ ಯಾವಾಗಲೂ ಇರುವುದಾಗಿ ಹೇಳುತ್ತಾರೆ. ಒಂದು ದಿನ ಎಲ್ಲ ದೇವರುಗಳ ಚಿತ್ರಗಳು ಒಂದರ ಮೇಲೊಂದು ಕಾಣಿಸಿಕೊಂಡವು. ಗುರೂಜಿಯವರ ಚಿತ್ರಕೂಡ ಅದರಲ್ಲಿದ್ದು, 'ಎಲ್ಲವೂ ಒಂದೇ' ಎಂಬ ಸತ್ಯದ ಅರಿವನ್ನು ನನ್ನಲ್ಲಿ ಮೂಡಿಸಿದಂತಿತ್ತು.

—ವಿದ್ಯಾ ಅರೋರ

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.200/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 562 149 ಮಾನಸ ಫೌಂಡೇಷನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಷನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 562 149
ಪ್ರಕಾಶನ ಸ್ಥಳ : ಮಾನಸ ಫೌಂಡೇಷನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 562 149
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, ಡಾ॥ ಮೋದಿ ಮುಖ್ಯ ರಸ್ತೆ, ಬೆಂಗಳೂರು – 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ